ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಟಿಮ್ ಸೀಫರ್ಟ್ ಅವರ ಅಜೇಯ ಅರ್ಧ ಶತಕದ ನೆರವಿನಿಂದ ನ್ಯೂಜಿಲೆಂಡ್ ಟಿ-20 ವಿಶ್ವಕಪ್ ಡಿ ಗುಂಪಿನ ಪಂದ್ಯದಲ್ಲಿ ಮಂಗಳವಾರ ಯುಎಇ ತಂಡವನ್ನು 10 ವಿಕೆಟ್‌ಗಳಿಂದ ಮಣಿಸಿತು.

11 ಫೆಬ್ರವರಿ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 327 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಪ್ರವಾಸೋದ್ಯಮದ ಬಗ್ಗೆ ಸರ್ಕಾರಕ್ಕೆ ಅಲಕ್ಷ್ಯ ವೇಕೆ ? » 2


ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ » 3



ಎಐ ಕಂಟೆಂಟ್ ನಿಯಂತ್ರಣಕ್ಕೆ ಕೇಂದ್ರ ಕಠಿಣ ಕಾನೂನು » 4

# ನಾವು ಕದ್ದುಮುಚ್ಚಿ ಮಾತನಾಡಿಕೊಂಡಿಲ್ಲ

## ಬಾಯಿ ಮುಚ್ಚಿಕೊಂಡಿರಬೇಕೆಂಬ ಆದೇಶ ಎಲ್ಲರೂ ಪಾಲಿಸಬೇಕು: ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ

**ಬೆಂಗಳೂರು** : ನಾನು, ಮುಖ್ಯಮಂತ್ರಿ ಸಿದ್ದರಾಮಯ್ಯ ಕದ್ದು ಮುಚ್ಚಿ ಮಾತನಾಡಿಕೊಂಡಿಲ್ಲ. ನಮ್ಮ ಪಕ್ಷದ ವರಿಷ್ಠರು ಸೇರಿ ಮಾತನಾಡಿಕೊಂಡಿದ್ದೇವೆ. ಬೇರೆಯವರೆಲ್ಲ ಅದಕ್ಕೆ ಟೆನ್ಷನ್ ತೆಗೆದುಕೊಳ್ಳುವುದು, ಹೇಳಿಕೆ ಕೊಡುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲವೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಮಂಗಳವಾರ ದೆಹಲಿಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆಯ ಬಗ್ಗೆ ನಾನು ಮತ್ತು ಸಿದ್ದರಾಮಯ್ಯ ಮಾತನಾಡಿ ಕೊಂಡಿದ್ದೇವೆ. ಬೇರೆಯವರು ಅನಗತ್ಯವಾಗಿ ಹೇಳಿಕೆ ನೀಡಿ ಪಕ್ಷಕ್ಕೆ ಹಾನಿ ಮಾಡಬಾರದು. ಎಲ್ಲರೂ ಬಾಯಿ ಮುಚ್ಚಿಕೊಂಡು ಇದ್ದರೆ ಒಳ್ಳೆಯದೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ. ಅದನ್ನು ನಾವು ಪಾಲನೆ ಮಾಡಬೇಕೆಂದು ತಿಳಿಸಿದರು.

ನನ್ನ ಪರ, ವಿರುದ್ಧ ಹೇಳಿಕೆಗಳನ್ನು ಶಾಸಕರು, ಮಂತ್ರಿಗಳು, ಯಾರೇ ನೀಡುತ್ತಿರಬಹುದು. ಈ ಹೇಳಿಕೆಗಳು ಪಕ್ಷಕ್ಕೆ ಹಾನಿ ಮಾಡುವ ಹೇಳಿಕೆಗಳೇ






ಹೊರತು ಪಕ್ಷಕ್ಕೆ ಒಳ್ಳೆಯದನ್ನು ಮಾಡುವ ಹೇಳಿಕೆಗಳಲ್ಲ. ಹೈಕಮಾಂಡ್ ಗೊಂದಲವನ್ನು ಬೇಗ ಇತ್ಯರ್ಥ ಮಾಡಬೇಕೆನ್ನುವ ಬಗ್ಗೆ ಕೇಳಿದಾಗ, ನನಗೆ ಯಾವ ಗೊಂದಲವೂ ಇಲ್ಲ. ಗೊಂದಲ ಬೇರೆಯವರಿಗೆ ಇರಬಹುದು. ನಾನು ಹಾಗು ಸಿದ್ದರಾಮಯ್ಯ ಅವರು ಏನು ಮಾತನಾಡಿದ್ದೇವೆ ಎಂಬುದು ನಮಗೆ ಗೊತ್ತು ಎಂದರು.

ಕೆಲ ಕಾಂಗ್ರೆಸ್ ನಾಯಕರು ಶುಭಸುದ್ದಿ ತರುವಿರಿ ಎಂದಿರುವ ಬಗ್ಗೆ ಕೇಳಿದಾಗ, ಪ್ರತಿದಿನವೂ ನನಗೆ ಶುಭದಿನ, ಶುಭ ಜೀವನ, ಶುಭ ಪ್ರಾರಂಭ, ಯಶಸ್ಸಿನ ದಿನ, ಪ್ರತಿದಿನವೂ ಕಷ್ಟದ ದಿನವೇ. ಪ್ರತಿದಿನವೂ ಏನೂ ಸುಲಭವಾಗಿ ಇರುವುದಿಲ್ಲ. ಜನರ ಕಷ್ಟಗಳನ್ನು ಬಗೆಹರಿಸಬೇಕಾದರೆ ಕಷ್ಟ ಕಾರ್ಪಣ್ಯಗಳು, ಅಡಚಣೆಗಳು, ತೊಡಕುಗಳು ಇದ್ದೇ ಇರುತ್ತವೆ. ಟೀಕೆಗಳು ಬರುತ್ತಲೇ ಇರುತ್ತವೆ. ಟೀಕೆಗಳನ್ನು ಎದುರಿಸಲೇಬೇಕು. ನಮ್ಮ ಕೆಲಸವನ್ನು ಮುಂದುವರೆಸಲೇ ಬೇಕು ಎಂದು ಉತ್ತರಿಸಿದರು.

ದೆಹಲಿಗೆ ಹೋದ ಮೇಲೆ ಯಾವ ಯಾಯಕರು ಸಿಗುತ್ತಾರೋ ಅವರನ್ನು ಭೇಟಿ ಮಾಡಲಾಗುವುದು. ಸಂಸತ್ ಅಧಿವೇಶನ ನಡೆಯುತ್ತಿರುವುದರಿಂದ ಬಿಡುವಿದ್ದರೆ ಖಂಡಿತವಾಗಿ ಭೇಟಿ ಮಾಡುತ್ತೇನೆ. ಇಂದು ಸಂಜೆ 4 ಗಂಟೆಗೆ ಎಐಸಿಸಿಯಲ್ಲಿ ಸಭೆ ಇದೆ. ವಿವಿಧ ಚುನಾವಣೆಗಳು ಹಾಗು ರಾಜಕೀಯ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಸಲಾಗುವುದು. ಚುನಾವಣಾ ದಿನಾಂಕಗಳು ಘೋಷಣೆಯಾಗುವ ಸಾಧ್ಯತೆ ಇದೆ. ಆದ ಕಾರಣಕ್ಕೆ ನನ್ನನ್ನು ಚರ್ಚೆ ನಡೆಸಲು ಕರೆದಿದ್ದಾರೆ. ನಾನು ಹೋಗುತ್ತಿದ್ದೇನೆ ಎಂದರು.

ಕೇರಳಕ್ಕೆ ಹೋಗಿದ್ದೆ ನಂತರ ಅಸ್ಸಾಂಗೂ ತೆರಳಬೇಕು. ಬಜೆಟ್ ಸಭೆ ಇರುವ ಕಾರಣಕ್ಕೆ ಮುಖ್ಯಮಂತ್ರಿ ಬಳಿ ಬರಲು ಆಗುವುದಿಲ್ಲ ಎಂದು ಮನವಿ ಮಾಡಿದ್ದೆ. ಸೋಮವಾರದಂದು ಅಧಿಕಾರಿಗಳ ಜೊತೆ ಬಜೆಟ್ ಸಭೆ ನಡೆಸಿದ್ದೇನೆ. ಅವರು ಎಲ್ಲವನ್ನು ವಿವರಿಸುತ್ತಾರೆ. ನಂತರ ಬಂದು ಅವರ ಬಳಿ ಮಾತನಾಡುತ್ತೇನೆಂದು ತಿಳಿಸಿದರು.

### ಆಹ್ವಾನ ಬಂದರೆ ಮಾತ್ರ ದೆಹಲಿಗೆ: ಸಿಎಂ

ರಾಜ್ಯದ ನಾಯಕತ್ವ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನವೇ ಅಂತಿಮ. ಈ ವಿಷಯವನ್ನು ಪದೇ ಪದೇ ಕೇಳುವುದು ಬೇಡ. ಆಹ್ವಾನ ಬಂದರೆ ಮಾತ್ರ ನಾನು ದೆಹಲಿಗೆ ಹೋಗುತ್ತೇನೆ, ಆಹ್ವಾನವಿಲ್ಲದೆ ಹೋಗುವ ಅಗತ್ಯವಿಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.
ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಸ್ಸಾಂ ವಿಧಾನಸಭಾ ಚುನಾವಣೆ ತಯಾರಿ ಸಂಬಂಧ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಸಭೆಗಳಲ್ಲಿ ಭಾಗವಹಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಬಜೆಟ್ ಕುರಿತು ಸಭೆ ನಡೆಸಲಾಗುವುದೆಂದು ಹೇಳಿದರು.

# ಬ್ರೆಜಿಲ್‌ನಲ್ಲಿ ಉತ್ಪಾದನೆ ಹೆಚ್ಚಳ: ಅರೇಬಿಕಾ ಧಾರಣೆ ಕುಸಿತ

## 6 ತಿಂಗಳಲ್ಲಿ ಎಪಿ-28 ಸಾವಿರದಿಂದ 23,500ರೂ. ಗೆ, ಎಸಿ-15 ರಿಂದ 12 ಸಾವಿರಕ್ಕೆ ಇಳಿಕೆ

• ಪ್ರಜೋದಯ ವರದಿ

**ಹಾಸನ:** ಬ್ರೆಜಿಲ್‌ನಲ್ಲಿ ದಾಖಲೆ ಮಟ್ಟದ ಅರೇಬಿಕಾ ಕಾಫಿ ಉತ್ಪಾದನೆ ನಿರೀಕ್ಷೆಯಲ್ಲಿರುವುದರಿಂದ ಕಾಫಿಧಾರಣೆ ಸತತವಾಗಿ ಕುಸಿತ ಕಾಣುತ್ತಿದೆ. ಆರು ತಿಂಗಳಲ್ಲಿ ಕನಿಷ್ಠ ಮಟ್ಟಕ್ಕೆ ತಲುಪಿದೆ.

ಜನವರಿ ತಿಂಗಳಲ್ಲಿ ಅರೇಬಿಕಾ ಪಾರ್ಚ್‌ಮೆಂಟ್‌ಗೆ 26,500 ರೂ., ಅರೇಬಿಕಾ ಚರಿ 14,000 ರೂ. ಬೆಲೆ ಸಿಗುತ್ತಿತ್ತು. ಮಂಗಳವಾರದ ಮಾರುಕಟ್ಟೆ ಧಾರಣೆ ಅನ್ವಯ ಎಪಿ 23,500 ಹಾಗು ಎಸಿ 12,000 ರೂ.ಗೆ ಕುಸಿತ ಕಂಡಿದೆ. ಆರು ತಿಂಗಳ ಹಿಂದೆ ಎಪಿ-28 ಸಾವಿರ ರೂ. ಎಸಿಗೆ 15 ಸಾವಿರ ರೂ. ಧಾರಣೆ ಇತ್ತು. ಕೇವಲ 6 ತಿಂಗಳ ಅವಧಿಯಲ್ಲಿ 5 ಸಾವಿರ ರೂ. ಕಡಿಮೆಯಾಗಿದೆ.

ಅರೇಬಿಕಾ ಕಾಫಿ ಫ್ಯೂಚರ್ಸ್ ಬೆಲೆಗಳು ಪ್ರತಿ ಪೌಂಡ್‌ಗೆ ಸುಮಾರು 3 ಮಟ್ಟದಲ್ಲಿ ವಹಿವಾಟು ನಡೆಸುತ್ತಿದೆ. ಬ್ರೆಜಿಲ್‌ನಲ್ಲಿ ದಾಖಲೆ ಮಟ್ಟದ ಉತ್ಪಾದನೆ ನಿರೀಕ್ಷೆಯಲ್ಲಿರುವುದು ಬೆಲೆ ಕುಸಿಯಲು ಪ್ರಮುಖ ಕಾರಣವಾಗಿದೆ. ಫೆ.5ರಂದು ಬ್ರೆಜಿಲ್‌ನ ರಾಷ್ಟ್ರೀಯ ಸರಬರಾಜು ಸಂಸ್ಥೆ (ಸಿಒಎನ್‌ಎಬಿ) ಪ್ರಕಟಿಸಿದ ಮಾಹಿತಿಯ ಪ್ರಕಾರ, 2026ರಲ್ಲಿ ಬ್ರೆಜಿಲ್ ಕಾಫಿ ಉತ್ಪಾದನೆ ಕಳೆದ ವರ್ಷಕ್ಕಿಂತ ಶೇ.17.2 ರಷ್ಟು ಹೆಚ್ಚಳವಾಗಿ 66.2 ಮಿಲಿಯನ್ ಬ್ಯಾಗ್‌ಗಳಿಗೆ (ಪ್ರತಿ ಬ್ಯಾಗ್ 60 ಕೆಜಿ) ತಲುಪುವ ನಿರೀಕ್ಷೆ ಇದೆ. ಅದರಲ್ಲಿ ಅರೇಬಿಕಾ ಕಾಫಿ ಉತ್ಪಾದನೆ 44.1 ಮಿಲಿಯನ್ ಬ್ಯಾಗ್ ಹಾಗು ರೋಬಸ್ಟಾ ಕಾಫಿ ಉತ್ಪಾದನೆ ಕಳೆದ ವರ್ಷಕ್ಕಿಂತ ಶೇ. 6.3ರಷ್ಟು ಹೆಚ್ಚಳವಾಗಿ 22.1 ಮಿಲಿಯನ್ ಬ್ಯಾಗ್‌ಗಳು ತಲುಪಲಿದೆ.

ಬ್ರೋಕರೇಜ್ ಸಂಸ್ಥೆ ಇಸಾ ಹೇಳುವಂತೆ, ಮುಂದಿನ 3 ತಿಂಗಳಲ್ಲಿ ಆರಂಭಗೊಳ್ಳಲಿರುವ ಬ್ರೆಜಿಲ್‌ನ ಹೊಸ ಕಾಫಿ ಕಟಾವು 75.8 ಮಿಲಿಯನ್ ಬ್ಯಾಗ್‌ಗಳ ದಾಖಲೆ ಮಟ್ಟಕ್ಕೆ ತಲುಪುವ ಸಾಧ್ಯತೆ ಇದೆ. ಕಾಫಿ ಮಾರುಕಟ್ಟೆ ಅಧ್ಯಯನ ಸಂಸ್ಥೆ ಸಿಇಪಿಇಎ ಸಂಶೋಧಕರ ಪ್ರಕಾರ, ಜನವರಿ ತಿಂಗಳ ಬಹುತೇಕ ಅವಧಿಯಲ್ಲಿ ಉತ್ತಮ ಹವಾಮಾನ ಇದ್ದದ್ದು ಹಾಗು ಫೆಬ್ರವರಿ ಆರಂಭದಲ್ಲೂ ತೇವಾಂಶ ಮುಂದುವರಿಯುವ ನಿರೀಕ್ಷೆ ಇರುವುದರಿಂದ, ಮಹತ್ವದ ಹಂತದಲ್ಲಿ ಕಾಯಿ ಕಟ್ಟುವಿಕೆ ಉತ್ತಮವಾಗುವ ಸಾಧ್ಯತೆ ಇದೆ.

**ಮಂಗಳವಾರದ ಕಾಫಿ ಧಾರಣೆ: 50 ಕೆ.ಜಿ.ಗೆ**

| ಟ್ರೇಡರ್ಸ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
|---|---|---|---|---|
| ವೆಸ್ಟರ್ನ್ ಕಾಫಿ | 24,250 | 13,000 | 18,000 | 10,000 |
| ಬಾಳ್ಳುಪೇಟೆ | 23,600 | 12,000 | 18,000 | 9,000 |
| ಚಿಕ್ಕಮಗಳೂರು | 23,400 | 11,700 | 17,800 | 9,700 |
| ಕುಂಬಾರಳ್ಳಿ ಸಕಲೇಶಪುರ | 23,500 | 12,000 | 17,800 | 9,000 |
| ಸೋಮವಾರಪೇಟೆ | 23,300 | 12,800 | 00 | 00 |
| ಹಾಸನ | 23,300 | 00 | 00 | 00 |

# ಮಲೆನಾಡು ಭಾಗಕ್ಕೆ ನೆಟ್‌ವರ್ಕ್ ವ್ಯವಸ್ಥೆ ಕಲ್ಪಿಸಿ

## ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾಗೆ ಸಂಸದ ಶ್ರೇಯಸ್ ಮನವಿ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ಭಾಗದಲ್ಲಿ ಹೆಚ್ಚುತ್ತಿರುವ ಮಾನವ-ಕಾಡಾನೆ ಸಂಘರ್ಷವನ್ನು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕರ ಸುರಕ್ಷತೆಗೆ ಅಗತ್ಯವಾದ ಮೊಬೈಲ್ ನೆಟ್‌ವರ್ಕ್ ವ್ಯವಸ್ಥೆ ಕಲ್ಪಿಸುವಂತೆ ಕೋರಿ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಎಂ.ಸಿಂಧ್ಯಾ ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ಮಂಗಳವಾರ ಕೇಂದ್ರ ಸಚಿವರನ್ನು ಭೇಟಿಯಾಗಿ ಹಾಸನ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ವಿಚಾರಗಳನ್ನು ಮಂಡಿಸಿದರು. ಸಾರ್ವಜನಿಕ ಸುರಕ್ಷತೆ ಮತ್ತು ಪರಿಣಾಮಕಾರಿ ಆಡಳಿತದ ದೃಷ್ಟಿಯಿಂದ 4ಜಿ ಸ್ಯಾಚುರೇಷನ್ ಯೋಜನೆಯಡಿ ಮೊಬೈಲ್ ದೂರಸಂಪರ್ಕ ಮೂಲ ಸೌಕರ್ಯ ಒದಗಿಸುವಂತೆ ಒತ್ತಾಯಿಸಿದ ಅವರು, ಬೇಲೂರು ತಾಲ್ಲೂಕಿನ ದೊಡ್ಡಸಾಲಾವರ, ಹೊಳಲು, ಬ್ಯಾದನೆ, ಕನಹಳ್ಳಿ, ನೆರ್ಲಮಕ್ಕಿ, ಅಂಕಿಹಳ್ಳಿ, ಸಕಲೇಶಪುರ ತಾಲ್ಲೂಕಿನ ಈಚಲಬೀಡು, ಹಿರಿದನಹಳ್ಳಿ ಹಾಗು ಆಲೂರು ತಾಲ್ಲೂಕಿನ ಮಾದಿಹಳ್ಳಿ ಮತ್ತು ಹರಿಹಳ್ಳಿಯಲ್ಲಿ ಮೊಬೈಲ್ ಟವರ್ ಅಳವಡಿಸುವಂತೆ ಮನವಿ ಮಾಡಿದೆ.



ಹಾಸನ ಅಂಚೆ ವಿಭಾಗದಲ್ಲಿ 17 ಖಾಲಿ ಜಾಗಗಳು ಲಭ್ಯವಿದ್ದರೂ ಅನೇಕ ಅಂಚೆ ಕಚೇರಿಗಳು ಇನ್ನೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ತಾಲ್ಲೂಕು ಕೇಂದ್ರವಾದ ಆಲೂರಿನಲ್ಲಿ ಅಂಚೆ ಕಚೇರಿ ಕಟ್ಟಡ ನಿರ್ಮಾಣ ಸೇರಿ ಹಾಸನ (ಎನ್.ಆರ್.ಬಡಾವಣೆ), ಹರಳಹಳ್ಳಿ, ಬಾಗೂರು, ಗೊರೂರು, ರಾಮನಾಥಪುರ, ನುಗ್ಗೇಹಳ್ಳಿ, ಶಾಂತಿಗ್ರಾಮ, ಕಂದಲಿ, ದುದ್ದ, ಯಸಳೂರು, ಬಿಕ್ಕೋಡು, ಪಾಳ್ಯ, ಹಾನುಬಾಳು, ಹಗರೆ ಹಾಗೂ ಕೆ. ಹೊಸಕೋಟೆಗಳಲ್ಲಿ ಸಬ್‌ಪೋಸ್ಟ್ ಕಚೇರಿ ಕಟ್ಟಡಗಳಿಗೆ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದರು.

**ಕೇಂದ್ರ ರೈಲ್ವೆ ಸಚಿವರ ಭೇಟಿ**

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಸಂಸದ ಶ್ರೇಯಸ್ ಪಟೇಲ್ ಅವರು ಭೇಟಿಯಾಗಿ

» ನಾಲ್ಕನೇ ಪುಟದಲ್ಲಿ

# ಜಿಲ್ಲಾಧಿಕಾರಿ ಸಂಧಾನ: ಎನ್.ಹೆಚ್-206 ಅಡೆತಡೆ ನಿವಾರಣೆ

## ಬೆಂಡೆಕೆರೆ ರೈತರಿಗೆ ವೈಜ್ಞಾನಿಕ ಪರಿಹಾರ ಭರವಸೆ: 8 ವರ್ಷದ ಹೋರಾಟ ಅಂತ್ಯ

• ಪ್ರಜೋದಯ ವರದಿ

**ಅರಸೀಕೆರೆ:** ರಾಷ್ಟ್ರೀಯ ಹೆದ್ದಾರಿ-206 ಅಭಿವೃದ್ಧಿಗೆ ಕಳೆದ 8 ವರ್ಷಗಳಿಂದ ಅಡ್ಡಿಯುಂಟು ಮಾಡುತ್ತಿದ್ದ ರೈತರ ಮನವೊಲಿಸುವಲ್ಲಿ ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ ಅವರು ಯಶಸ್ವಿಯಾಗಿದ್ದಾರೆ.

ತಾಲ್ಲೂಕಿನ ಬೆಂಡೆಕೆರೆ ಗ್ರಾಮದ ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ಸ್ವಾಧೀನ ಪಡಿಸಿಕೊಂಡ ರೈತರ ಭೂಮಿಗೆ ಸೂಕ್ತ ಪರಿಹಾರ ನೀಡಿಲ್ಲವೆಂದು ಆರೋಪಿಸಿ, ಪೊಲೀಸ್ ರಕ್ಷಣೆಯಲ್ಲಿ ಹಲವು ಬಾರಿ ಗುತ್ತಿಗೆದಾರರು ಮತ್ತು ಎನ್‌ಹೆಚ್‌ಎ ಅಧಿಕಾರಿಗಳು ಕಾಮಗಾರಿ ನಡೆಸಲು ಮುಂದಾದರೂ ಅಡ್ಡಿಪಡಿಸುತ್ತಿದ್ದರು.

ಈ ಹಿನ್ನಲೆ ಹೋರಾಟ ನಡೆಸುತ್ತಿದ್ದ ರೈತರನ್ನು ಜಿಲ್ಲಾಧಿಕಾರಿ ಮಂಗಳವಾರ ಭೇಟಿ ಮಾಡಿ, ಎರಡೂವರೆ ಗಂಟೆ



ಕಾಲ ಜಮೀನು ಮಾಲೀಕರಾದ ರೈತರೊಂದಿಗೆ ಸುದೀರ್ಘ ಮಾತುಕತೆ ನಡೆಸುವ ಮೂಲಕ ಸಂಧಾನ ಮಾಡಿ, 8 ವರ್ಷಗಳ ಸಮಸ್ಯೆಯನ್ನು ಪರಿಹಾರ ಮಾಡಿದ್ದಾರೆ. ಈ ಮೂಲಕ 5 ಕಿ.ಮೀ ಮಾರ್ಗದ ರಾಷ್ಟ್ರೀಯ ಹೆದ್ದಾರಿ-206ರ ನಿರ್ಮಾಣ ಕಾಮಗಾರಿಗೆ ಇದ್ದಂತಹ ಅಡೆ ತಡೆಗಳು ನಿವಾರಣೆಯಾಗಿದೆ. ಜಿಲ್ಲಾಧಿಕಾರಿ ಸಂಧಾನದ ಬಳಿಕ ಗ್ರಾಮಸ್ಥರ ಮನವೊಲಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಮಾತನಾಡಿ, ಬಹು ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದ ರಾಷ್ಟ್ರೀಯ ಹೆದ್ದಾರಿ-206ರ ಅಭಿವೃದ್ಧಿ ಕಾಮಗಾರಿ ಪ್ರಾರಂಭಕ್ಕೆ ಇದ್ದಂತಹ ವಿಘ್ನಗಳು ನಿವಾರಣೆಯಾಗಿದೆ. ಅವೈಜ್ಞಾನಿಕವಾಗಿ ಅಂದಿನ ಅಧಿಕಾರಿಗಳು ನಿಗದಿ ಮಾಡಿದ್ದ ಪರಿಹಾರ ಮೊತ್ತದಿಂದ ನೊಂದ ರೈತರಿಗೆ ಸೂಕ್ತ ಪರಿಹಾರವನ್ನು ಕಾನೂನಿನ ಚೌಕಟ್ಟಿನಲ್ಲಿ ನೀಡಲು ಭರವಸೆ ನೀಡಿದ್ದೇನೆ. ಹಲವಾರು ವರ್ಷಗಳ ಜಟಿಲ ಸಮಸ್ಯೆ ಬಗೆಹರಿಸಲು ಸಹಕಾರ ನೀಡಿದ ಗ್ರಾಮಸ್ಥರು ಮತ್ತು ರೈತರಿಗೆ ನಾನು ಸರ್ಕಾರದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಸ್ತೆ ನಿರ್ಮಾಣ ಆಗದಿದ್ದರೆ ತಾಲ್ಲೂಕಿನ ಅಭಿವೃದ್ಧಿಯಲ್ಲಿ ಆಗುವ ಕುಂಠಿತವನ್ನು ರೈತರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆಂದು ಹೇಳಿದರು.

ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಅವರು ಮಾತನಾಡಿ, ಬೆಂಡೆಕೆರೆ ಗ್ರಾಮಸ್ಥರು ಸೇರಿ ಸುತ್ತಮುತ್ತಲಿನ ಜಮೀನಿನ ಮಾಲೀಕರು ಜಿಲ್ಲಾಧಿಕಾರಿ ಸಮ್ಮುಖದಲ್ಲಿ ನಡೆದ ಸುದೀರ್ಘ ಚರ್ಚೆಯಲ್ಲಿ ಒಮ್ಮತಕ್ಕೆ ಬರುವುದರ ಮೂಲಕ ಹೋರಾಟವನ್ನು ಹಿಂಪಡೆದಿದ್ದಾರೆ. ಬೆಂಡೆಕೆರೆ ಸಮೀಪದ ಕೆ.ಜಿ.ಅಗ್ರಹಾರದ ಬಳಿಯ ಜಮೀನುಗಳ ಪರಿಹಾರ ದರವನ್ನೇ ಮೂಲವಾಗಿ ಇಟ್ಟುಕೊಂಡಿದ್ದ ಅಧಿಕಾರಿಗಳು ಅವೈಜ್ಞಾನಿಕವಾಗಿ ಪರಿಹಾರ ಹಣ ವರದಿ ನೀಡಿದ್ದರು. ಪಹಣಿಗಳಲ್ಲಿ ಹಳದಿ ಪ್ರದೇಶ ಎಂದು ನಮೂದಿಸಿರುವ ಮತ್ತು ಪಹಣಿಗಳಲ್ಲಿರುವ ತಪ್ಪು ಮಾಹಿತಿಗಳನ್ನು ಸರಿಪಡಿಸಿಕೊಡುವ ಭರವಸೆಯನ್ನು ಜಿಲ್ಲಾಧಿಕಾರಿಯವರು ನೀಡಿದ್ದಾರೆ. ಈ ಸಭೆಯಲ್ಲಿ 12 ರೈತರ ಸಮಸ್ಯೆ ಬಗೆ ಹರಿದಿದ್ದು, ಉಳಿದ ರೈತರ

» ನಾಲ್ಕನೇ ಪುಟದಲ್ಲಿ

> **ಬೆಂಡೆಕೆರೆ ಗ್ರಾಮಸ್ಥರ ಹೋರಾಟಕ್ಕೆ ಪರಿಹಾರ ದೊರೆಯಲು ಜಿಲ್ಲಾಧಿಕಾರಿ ಮಧ್ಯ ಪ್ರವೇಶದಿಂದ ಬಗೆ ಹರಿದಿರುವುದು ಸಂತಸ ತಂದಿದೆ. ವೈಜ್ಞಾನಿಕ ಪರಿಹಾರ ಹಣ ಬಿಡುಗಡೆಗೆ ಸೂಕ್ತ ಕ್ರಮ ಕೈಗೊಳ್ಳಲು ನಾನು ಕೂಡ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದೇನೆ.**
> **- ಕೆ.ಎಂ.ಶಿವಲಿಂಗೇಗೌಡ, ಶಾಸಕ**

# ರೀ-ಕೆವೈಸಿ ಕಡ್ಡಾಯ: ವಿಳಂಬವಾದರೆ ಖಾತೆ ಬ್ಲಾಕ್

## ಬ್ಯಾಂಕಿಂಗ್ ಜಾಗೃತಿ, ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಜನ ಜಾಗೃತಿ

• ಪ್ರಜೋದಯ ವರದಿ

**ಹಾಸನ:** ಬ್ಯಾಂಕ್ ಖಾತೆ ಹೊಂದಿರುವ ಪ್ರತಿಯೊಬ್ಬ ಗ್ರಾಹಕರೂ ತಮ್ಮ ಖಾತೆಯ ರೀ-ಕೆವೈಸಿ (ಮರು ಕೆವೈಸಿ) ಪ್ರಕ್ರಿಯೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲೇಬೇಕು. ವಿಳಂಬ ವಾದಲ್ಲಿ ಖಾತೆ ಬ್ಲಾಕ್ ಆಗುವ ಸಾಧ್ಯತೆ ಇದೆ ಎಂದು ಬ್ಯಾಂಕ್ ಅಧಿಕಾರಿಗಳು ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಜಿಲ್ಲಾ ಲೀಡ್ ಬ್ಯಾಂಕ್ ಹಾಗು ವಿವಿಧ ಬ್ಯಾಂಕ್ ಸಹಯೋಗದಲ್ಲಿ ಫೆ.13ರವರೆಗೆ ಬ್ಯಾಂಕಿಂಗ್ ಜಾಗೃತಿ ಮತ್ತು ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ. ಹಣ ಕಾಸು ಸಾಕ್ಷರತೆ, ಡಿಜಿಟಲ್




ಬ್ಯಾಂಕಿಂಗ್ ಸುರಕ್ಷತೆ ಹಾಗೂ ಸೈಬರ್ ಫ್ರಾಡ್ ತಡೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದೇ ಈ ಜಾಥಾದ ಉದ್ದೇಶವಾಗಿದೆ.

ಜಾಥಾದಲ್ಲಿ ಎನ್‌ಡಿಎಂ ಮುಖ್ಯಸ್ಥೆ ಲತಾ ಅವರು ಮಾತನಾಡಿ, ವಿಳಾಸದಲ್ಲಿ ಯಾವುದೇ ಬದಲಾವಣೆ ಇಲ್ಲದಿದ್ದರೂ ಖಾತೆದಾರರು ತಮ್ಮ ಸಮೀಪದ ಯಾವುದೇ ಬ್ಯಾಂಕ್ ಶಾಖೆಗೆ ತೆರಳಿ ರೀ-ಕೆವೈಸಿ ಅಪ್‌ಡೇಟ್ ಮಾಡಿಸಿಕೊಳ್ಳಬಹುದಾಗಿದೆ. ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳಾದ ಪಿಎಂಜೆಜೆವೈ, ಪಿಎಂಎಸ್‌ವೈ ಹಾಗು ಅಟಲ್ ಪಿಂಚಣಿ ಯೋಜನೆ ಗಳಿಗೆ ರೀ-ಕೆವೈಸಿ ಕಡ್ಡಾಯವಾಗಿದ್ದು, ಜಾಗೃತಿ ಕೊರತೆಯಿಂದ ಸೌಲಭ್ಯ ಕಳೆದುಕೊಳ್ಳುವ ಅಪಾಯವಿದೆ ಎಂದು ಎಚ್ಚರಿಸಿದರು. ಜಿಲ್ಲೆಯಲ್ಲಿ 38 ಬ್ಯಾಂಕ್‌ಗಳು ಈ ಜಾಗೃತಿ ಜಾಥದಲ್ಲಿ ಭಾಗವಹಿಸಿರುವುದಾಗಿ ಮಾಹಿತಿ ನೀಡಿದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರಿಸರ್ವ್ ಮ್ಯಾನೇಜರ್ ಕನಯಲಾಲ್ ಗೋಪಾಲ್ ಅವರು ಮಾತನಾಡಿ, ರೀ-ಕೆವೈಸಿ ಪೂರ್ಣಗೊಳಿಸದ ಖಾತೆಗಳು ಈಗಾಗಲೇ ಬ್ಲಾಕ್ ಆಗುತ್ತಿವೆ. ಇತ್ತೀಚಿನ ದಿನಗಳಲ್ಲಿ ಸೈಬರ್ ಫ್ರಾಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆ ಓಟಿಪಿ ಹಾಗು ಪಾಸ್‌ವರ್ಡ್ ಅನ್ನು ಯಾರೊಂದಿಗೂ ಹಂಚಿಕೊಳ್ಳಬಾರದು. ಯಾವುದೇ ಅನುಮಾನ ಅಥವಾ ಸಮಸ್ಯೆಗಳಿದ್ದಲ್ಲಿ ನೇರವಾಗಿ ಬ್ಯಾಂಕ್ ಸಂಪರ್ಕಿಸಬೇಕೆಂದು ಸಲಹೆ ನೀಡಿದರು.

ಲೀಡ್ ಬ್ಯಾಂಕ್ ಮ್ಯಾನೇಜರ್ ಅರುಣ್ ಕುಲಕರ್ಣಿ ಅವರು ಮಾತನಾಡಿ, ಡಿಜಿಟಲ್ ಯುಗದಲ್ಲಿ ಮನೆಯಲ್ಲೇ ಕುಳಿತು ಬ್ಯಾಂಕಿಂಗ್ ವ್ಯವಹಾರಗಳು ನಡೆಯುತ್ತಿರು ವುದರಿಂದ ಗ್ರಾಹಕರಲ್ಲೂ ಜಾಗೃತಿ ಅಗತ್ಯವಾಗಿದೆ. ಸೈಬರ್ ಫ್ರಾಡ್ ತಡೆಗಟ್ಟಲು ಬ್ಯಾಂಕ್‌ಗಳು, ಸೈಬರ್ ಪೊಲೀಸ್ ಹಾಗೂ ಸಾರ್ವಜನಿಕರು ಒಟ್ಟಾಗಿ ಕಾರ್ಯನಿರ್ವಹಿಸಬೇಕಿದೆ. ಈ ಕುರಿತು ಅರಿವು ಮೂಡಿಸುವುದು ಬ್ಯಾಂಕ್‌ಗಳ ಕರ್ತವ್ಯವಾಗಿದ್ದು, ಅದಕ್ಕಾಗಿ ಈ ಜಾಗೃತಿ ಜಾಥ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

» ನಾಲ್ಕನೇ ಪುಟದಲ್ಲಿ

# ಓವರ್‌ಟೇಕ್ ವಿಚಾರ: ಸಾರಿಗೆ ಬಸ್ ಚಾಲಕನಿಗೆ ಥಳಿತ

• ಪ್ರಜೋದಯ ವರದಿ

ಹಾಸನ: ಬೇಲೂರು-ಹಾಸನ ಮುಖ್ಯ ರಸ್ತೆಯಲ್ಲಿ ಓವರ್‌ಟೇಕ್ ಮಾಡಿದ ವಿಚಾರಕ್ಕೆ ಕೆಎಸ್‌ಆರ್‌ಟಿಸಿ ಬಸ್ ಚಾಲಕನಿಗೆ ಕಾರು ಚಾಲಕ ಸೇರಿ ಇತರರು ಥಳಿಸಿ ಬಸ್‌ನ ಗಾಜು ಒಡೆದು ಹಾಕಿರುವ ಘಟನೆ ಬೇಲೂರು ತಾಲ್ಲೂಕಿನ ಹಗರೆ ಸಮೀಪ ಮಂಗಳವಾರ ನಡೆದಿದೆ.

ಚಿಕ್ಕಮಗಳೂರು-ಮೈಸೂರು ಮಾರ್ಗದ ಬಸ್ ಬೇಲೂರಿನಿಂದ ಹಾಸನಕ್ಕೆ ಬರುತ್ತಿದ್ದಾಗ ಹಿಂದಿನಿಂದ ಬಂದ ಕಾರು ಚಾಲಕ ಓವರ್‌ಟೇಕ್ ಮಾಡಿದ್ದ. ನಂತರ ಬಸ್ ಚಾಲಕ ಸಹ ಓವರ್‌ಟೇಕ್ ಮಾಡಿದ್ದಾನೆ. ಆಕ್ರೋಶಗೊಂಡ ಕಾರು ಚಾಲಕ ಪುನಃ ಜೋರಾಗಿ ವಾಹನ ಓಡಿಸಿಕೊಂಡು ಬಂದು ಬಸ್‌ಗೆ ಅಡ್ಡ ಹಾಕಿದ್ದಾನೆ. ಚಾಲಕ ಹಾಗು ಇತರರು ಕೆಳಗಿಳಿದು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಚಾಲಕನಿಗೆ ಹೊಡೆದಿದ್ದಾರೆ.

ರಸ್ತೆಯಲ್ಲಿ ಧರ್ಮಸ್ಥಳ ಪಾದಯಾತ್ರಿಗಳು ಹೊರಟಿದ್ದರು. ನಿಧಾನ ವಾಗಿ ಬರಬೇಕೆಂಬುದು ಗೊತ್ತಾಗುವುದಿಲ್ಲವೇ ಎಂದು ತೀವ್ರ ತರಾಟೆಗೆ ತೆಗೆದು ಕೊಂಡಿದ್ದಾರೆ ಮಾತ್ರವಲ್ಲದೆ ಆಕ್ರೋಶದಲ್ಲಿ ಬಸ್‌ಗೆ ಕಲ್ಲು ತೂರಿ ಗಾಜು ಒಡೆದಿದ್ದಾರೆ. ಈ ಘಟನೆಯಿಂದ ಬಸ್‌ನಲ್ಲಿದ್ದ ಪ್ರಯಾಣಿಕರು ಆತಂಕಕ್ಕೆ ಒಳಗಾದರು. ಹಗರೆ ಉಪ ಪೊಲೀಸ್ ಠಾಣೆಯಲ್ಲಿ ಬಸ್ ಚಾಲಕ ದೂರು ನೀಡಿದ್ದಾರೆ.



## ಹಳೆಯ ದ್ವೇಷ: ವ್ಯಕ್ತಿಗೆ ಚಾಕು ಇರಿತ

**ಅರಸೀಕೆರೆ:** ಹಳೆಯ ದ್ವೇಷದಿಂದ ವ್ಯಕ್ತಿ ಮೇಲೆ ಚಾಕುವಿನಿಂದ ಮಾರಣಾಂತಿಕ ಹಲ್ಲೆ ನಡೆಸಿ ರುವ ಘಟನೆ ನಗರದ ಹೆಚ್‌ಕೆಜಿಎನ್ ನಗರದಲ್ಲಿ ನಡೆದಿದೆ.

ನಗರದ ಮೊಹಮ್ಮದ್ ಫೈಜಲ್ ಗಾಯಾಳು. ಶೇಖ್ ಮತೀನ್ ಆರೋಪಿ. ಸೋಮವಾರ ರಾತ್ರಿ ಮೊಹಮ್ಮದ್ ಫೈಜಲ್ ಹಾಗು ಅಫ್ತಾಬ್ ಮಲ್ಲಿಕ್ ಅವರು ಮಾತನಾಡುತ್ತಾ ನಿಂತಿದ್ದಾಗ ಬೈಕ್‌ನಲ್ಲಿ ಮೊಹಮ್ಮದ್ ಅಲಿ ಹಾಗು ಶೇಖ್ ಮತೀನ್ ಬಂದಿದ್ದಾರೆ. ಮೊಹಮ್ಮದ್ ಫೈಜಲ್ ಕೂಗಿದಾಗ ಬೈಕ್‌ನಿಂದ ಕೆಳಗಿಳಿದು ವಾಪಾಸ್ ಬಂದ ಶೇಖ್ ಮತೀನ್, ಚಾಕುವಿನಿಂದ ಹಣೆ, ಕೆನ್ನೆ ಹಾಗು ಕುತ್ತಿಗೆಗೆ ಇರಿದಿದ್ದಾನೆ. ಗಾಯಾಳು ಫೈಜಲ್ ಜೋರಾಗಿ ಕೂಗಾಡುತ್ತಿದ್ದಂತೆ ಅಲ್ಲಿಂದ ಕಾಲ್ಕಿತ್ತಿದ್ದಾನೆ. ಇಬ್ಬರ ನಡುವೆ ಹಲವು ವರ್ಷಗಳಿಂದ ದ್ವೇಷವಿತ್ತು ಎನ್ನಲಾಗಿದೆ.

## ಅಕ್ರಮ ಗೋ ಸಾಗಾಟ: ವ್ಯಕ್ತಿ ಬಂಧನ

• ಪ್ರಜೋದಯ ವರದಿ

**ಹಾಸನ:** ಅಕ್ರಮವಾಗಿ ಗೋ ಸಾಗಾಣಿಕೆ ಮಾಡುತ್ತಿದ್ದ ವಾಹನವನ್ನು ವಶಕ್ಕೆ ಪಡೆದಿರುವ ಶಾಂತಿಗ್ರಾಮ ಠಾಣೆ ಪೊಲೀಸರು ಆರು ಹಸುಗಳನ್ನು ರಕ್ಷಿಸಿದ್ದಾರೆ.

ನಾಗಮಂಗಲ ತಾಲ್ಲೂಕು ಅಳಿಸಂದ್ರ ಗ್ರಾಮದ ರಂಜಿತ್ ಬಂಧಿತ ಆರೋಪಿ. ಹಾಸನದಲ್ಲಿ ಹಸುಗಳನ್ನು ಖರೀದಿಸಿದ್ದ ಆರೋಪಿ ಬೆಂಗಳೂರಿನ ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ಸೋಮವಾರ ರಾತ್ರಿ 8.30ರ ಸಮಯದಲ್ಲಿ ಶಾಂತಿಗ್ರಾಮ ಟೋಲ್ ಗೇಟ್ ಬಳಿ ನಿಂತಿದ್ದಾಗ ಅಶೋಕ ಲೈಲ್ಯಾಂಡ್ ವಾಹನ ಪರಿಶೀಲಿಸಿದರು. ಆರು ಹಸುಗಳು ಪತ್ತೆಯಾಗಿದೆ. ಕಸಾಯಿ ಖಾನೆಗೆ ಸಾಗಿಸುತ್ತಿರುವುದಾಗಿ ರಂಜಿತ್ ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದಾನೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಕೀಲರ ಮನವಿಗೆ ದೊರೆತ ಸ್ಪಂದನೆ | ಆರೋಗ್ಯ ಇಲಾಖೆಯಿಂದ ವ್ಯವಸ್ಥೆ

# ಜಿಲ್ಲಾ ನ್ಯಾಯಾಲಯದಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರ

• ಪ್ರಜೋದಯ ವರದಿ

**ಹಾಸನ:** ಪ್ರತಿನಿತ್ಯ ಸಾವಿರಾರು ಜನರು ಸೇರುವ ಜಿಲ್ಲಾ ನ್ಯಾಯಾ ಲಯ ಸಂಕೀರ್ಣದಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರ ತೆರೆಯಬೇಕೆಂಬ ಮನವಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸ್ಪಂದಿ ಸಿದ್ದು, ಮಂಗಳವಾರ ದಿಂದ ಕಾರ್ಯಾರಂಭ ಮಾಡಿದೆ.

ವಿವಿಧ ಪ್ರಕರಣಗಳ ವಿಚಾರಣೆ, ಸಾಕ್ಷಿ ನುಡಿಯಲು ಹಾಗು ಇನ್ನಿತರ ಕೆಲಸಗಳಿಗಾಗಿ ಜಿಲ್ಲೆಯ ಸಾವಿರಾರು ಕಕ್ಷಿಗಾರರು ಬರುತ್ತಾರೆ. ಜೊತೆಗೆ ನ್ಯಾಯಾಲಯದಲ್ಲಿ ಒಂದೂವರೆ ಸಾವಿರ ವಕೀಲರಿದ್ದಾರೆ. ನ್ಯಾಯಾ ಧೀಶರು, ಅಧಿಕಾರಿ ಹಾಗು ಸಿಬ್ಬಂದಿ ಸೇರಿ 15 ನ್ಯಾಯಾಲಯದಿಂದ ಸಾರ್ವಜನಿಕರು ಸೇರಿ ನಿತ್ಯ ಮೂರ ರಿಂದ ನಾಲ್ಕು ಸಾವಿರ ಜನರು ಇರುತ್ತಾರೆ. ಇಂತಹ ಜನನಿ ಬೀಡ ಸ್ಥಳಗಳಲ್ಲಿ ತುರ್ತು ಆರೋಗ್ಯ ಸೇವೆಗೆ ಪ್ರಥಮ ಚಿಕಿತ್ಸಾ ಕೇಂದ್ರದ ಅವಶ್ಯಕತೆ ಹೆಚ್ಚಿತ್ತು. ಈ ಸಂಬಂಧ



ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ||ಅನಿಲ್ ಅವ ರೊಂದಿಗೆ ಮಾತುಕತೆ ನಡೆಸಿ ವ್ಯವಸ್ಥೆ ಮಾಡಿಕೊಡುವಂತೆ ಕೋರಿದ್ದರು. ಅದಕ್ಕೆ ಪ್ರತಿಫಲ ಸಿಕ್ಕಿದ್ದು ಕಕ್ಷಿಗಾರರು ಮತ್ತು ವಕೀಲರಿಗೆ ಅನುಕೂಲ ವಾಗಲಿದೆ.

**ವಾರದ ಹಿಂದಷ್ಟೇ ವ್ಯಕ್ತಿ ಮೃತ**

ಅಣ್ಣ-ತಮ್ಮಂದಿರ ಜಮೀನು ವಾಜ್ಯ ಸಂಬಂಧ ವಿಚಾರಣೆಗೆ ಬಂದಿದ್ದ ವ್ಯಕ್ತಿಯೊಬ್ಬರು ವಾರದ ಹಿಂದಷ್ಟೇ ಮೃತಪಟ್ಟಿದ್ದರು. ಕೋರ್ಟ್ ತೀರ್ಪು ಪ್ರಕಟವಾಗುತ್ತಿದ್ದಂತೆ ತನಗೆ ಸೋಲಾ ಯಿತೆಂದು ಮನನೊಂದ ವ್ಯಕ್ತಿ ಕಾರಿಡಾರ್‌ನಲ್ಲಿ ಅಸ್ವಸ್ಥನಾಗಿ ಕುಳಿತಿದ್ದರು. ಸಂಬಂಧಿಕರು ನೋಡುವಷ್ಟರಲ್ಲಿ ಪ್ರಜ್ಞೆ ತಪ್ಪಿತ್ತು. ಆ್ಯಂಬುಲೆನ್ಸ್ ಮೂಲಕ ಹಿಮ್ಸ್‌ಗೆ ಕರೆತರಲಾಯಿತಾದರೂ ಅಷ್ಟರಲ್ಲಿ ಮೃತಪಟ್ಟಿದ್ದರು. ಅದೇ ರೀತಿ ಮಹಿಳಾ ಕಕ್ಷಿದಾರರೊಬ್ಬರು ತಲೆ ಸುತ್ತು ಬಂದು ಬಿದ್ದಿರುವ ಘಟನೆ ಇತ್ತೀಚೆಗೆ ನಡೆದಿದೆ. ಈ ರೀತಿ ಅನಾರೋಗ್ಯ ಸಮಸ್ಯೆಗಳು ಮರು ಕಳಿಸುತ್ತಿರುವ ಹಿನ್ನಲೆಯಲ್ಲಿ ಚಿಕಿತ್ಸಾ ಕೇಂದ್ರದ ಅವಶ್ಯ ಕತೆಯನ್ನು ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳು ನ್ಯಾಯಾಧೀಶರ ಗಮನಕ್ಕೆ ತಂದಿದ್ದರು.

**ಆಸ್ಪತ್ರೆಗೆ ದೂರ ನ್ಯಾಯಾಲಯ**

ಜಿಲ್ಲಾಧಿಕಾರಿ ಕಚೇರಿ ಸಮೀಪದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲಾ ನ್ಯಾಯಾಲಯವನ್ನು 2021ರಲ್ಲಿ ಹೊಸ ಬಸ್ ನಿಲ್ದಾಣ ಎದುರಿನ ನೂತನ ಸಂಕೀರ್ಣಕ್ಕೆ ಸ್ಥಳಾಂತರಿಸಲಾಯಿತು. ಹೀಗಾಗಿ ಸಾರ್ವಜನಿಕರಿಗೆ ಆಸ್ಪತ್ರೆ ಸೇರಿ ಅಗತ್ಯ ಸೌಕರ್ಯಗಳು ದೂರವಾಗಿವೆ. ಮೊದಲಾದರೆ ಆಸ್ಪತ್ರೆ ಸಮೀಪದಲ್ಲೇ ಇದ್ದುದರಿಂದ ತಕ್ಷಣ ದಾಖಲು ಮಾಡಬಹುದಿತ್ತು. ಈಗ ಅಂದಾಜು 3 ಕಿ.ಮೀ. ದೂರದಲ್ಲಿ ನ್ಯಾಯಾಲಯವಿದೆ. ಅಲ್ಲಿಂದ ಆ್ಯಂಬುಲೆನ್ಸ್ ಅಥವಾ ಕಾರುಗಳು ರೋಗಿಗಳನ್ನು ಕರೆತರುವಷ್ಟರಲ್ಲಿ ಪರಿಸ್ಥಿತಿ ಕೈ ಮೀರುವ ಸಾಧ್ಯತೆಗಳು ಹೆಚ್ಚಿರುತ್ತವೆ. ಜೊತೆಗೆ ರೈಲ್ವೆ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವುದು ಹಾಗು ರೈಲ್ವೆ ಬ್ಯಾರಿಕೇಡ್ ಹಾಕಿದರೆ ಕನಿಷ್ಠ 20 ನಿಮಿಷ ರಸ್ತೆಯಲ್ಲೇ ಕಳೆಯಬೇಕಾಗುತ್ತದೆ.

**ನರ್ಸ್, ಡಿ ಗ್ರೂಪ್ ನೌಕರರ ನಿಯೋಜನೆ**

ಜಿಲ್ಲಾ ನ್ಯಾಯಾಲಯದ ಮೊದಲ ಮಹಡಿಯಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರಕ್ಕೆ ಸುಸಜ್ಜಿತ ಕೊಠಡಿಯನ್ನು ಬಿಟ್ಟು ಕೊಟ್ಟಿದ್ದು, ಸೇವೆಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಒಬ್ಬ ನರ್ಸ್ ಹಾಗು ಒಬ್ಬರು ಡಿ ದರ್ಜೆ ನೌಕರರನ್ನು ನಿಯೋಜಿಸಲಾಗಿದೆ. ಕೊಠಡಿಗೆ ನಾಮಫಲಕ ಹಾಗು ಸಣ್ಣಪುಟ್ಟ ಕೆಲಸಗಳಾಗಬೇಕಿದೆ. ನ್ಯಾಯಾಲಯದಲ್ಲಿ ಆರೋಗ್ಯ ಸೇವೆ ಲಭ್ಯವಿರುವ ಕುರಿತು ಜನರಿಗೆ ಇನ್ನಷ್ಟೇ ಗೊತ್ತಾಗಬೇಕಿದೆ. ವಿವಿಧ ಕೆಲಸಗಳ ನಿಮಿತ್ತ ನ್ಯಾಯಾಲಯಕ್ಕೆ ಬರುವವರು ಆರೋಗ್ಯದಲ್ಲಿ ಏರುಪೇರಾದರೆ ಅಲ್ಲಿಗೆ ಸಂಪರ್ಕಿಸಬಹುದು. ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಆಸ್ಪತ್ರೆಗೆ ಕಳುಹಿಸಿ ಕೊಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

> **ಜಿಲ್ಲಾ ನ್ಯಾಯಾಲಯದಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರ ತೆರೆದಿದ್ದು, ಒಬ್ಬರು ನರ್ಸ್ ಹಾಗು ಡಿ ದರ್ಜೆ ನೌಕರನನ್ನು ನಿಯೋಜಿಸಲಾಗಿದೆ. ವೈದ್ಯರ ಅವಶ್ಯಕತೆ ಇದ್ದರೆ ಕಳುಹಿಸಿಕೊಡಲಾಗುವುದು. ಜಿಲ್ಲಾ ನ್ಯಾಯಾಧೀಶರ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗಿದೆ.**
> **-ಡಾ||ಅನಿಲ್, ಡಿಹೆಚ್‌ಓ**

## ನಿಧನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಹಂಗಾಮಿ ಅಧ್ಯಕ್ಷ ಬಿ.ಜೆ.ಕೃಷ್ಣೇಗೌಡ (69) ಅವರು ಮಂಗಳವಾರ ನಿಧನರಾದರು.



ಸುಮಾರು 10 ವರ್ಷಗಳ ಕಾಲ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ನಿರ್ದೇಶಕ, ಉಪಾಧ್ಯಕ್ಷ ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಜೊತೆಗೆ ಬರಗೂರು ಗ್ರಾಮ ಪಂಚಾಯಿತಿಯಲ್ಲಿ ಸದಸ್ಯ ಹಾಗು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರಿಗೆ ಪುತ್ರ ಮತ್ತು ಪುತ್ರಿ ಇದ್ದಾರೆ. ಬರಗೂರು ಹ್ಯಾಂಡ್ ಪೋಸ್ಟ್ ಸಮೀಪದ ತೋಟದಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಲಿದೆ.

CMYK CMYK CMYK CMYK

# ಪ್ರವಾಸೋದ್ಯಮದ ಬಗ್ಗೆ ಸರ್ಕಾರಕ್ಕೆ ಅಲಕ್ಷ್ಯವೇಕೆ?

ಯಾವುದೇ ಸರಕಾರಗಳು ಅಧಿಕಾರಕ್ಕೆ ಬಂದರೂ ಪ್ರವಾಸೋದ್ಯಮ ಇಲಾಖೆಯು ಒಂದು ರೀತಿ ಯಾರಿಗೂ ಬೇಡವಾದ ಇಲಾಖೆಯಾಗಿರುತ್ತದೆ. ಯಾವುದೇ ಸಚಿವರಿಗೆ ಈ ಇಲಾಖೆಯನ್ನು ಕೊಟ್ಟರೂ ಆರಂಭದಲ್ಲಿ ಕೊಸರಾಟದಲ್ಲಿಯೇ ಅಧಿಕಾರ ವಹಿಸಿಕೊಳ್ಳುತ್ತಾರೆ. ಇಂಥ ಬಹುತೇಕ ಸಚಿವರು, ತಮ್ಮ ಕಾಲಾವಧಿಯಲ್ಲಿ ಪ್ರವಾಸೋದ್ಯಮ ನೀತಿಯ ಹೊರತಾಗಿ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂದರೆ ಅದಕ್ಕೆ ಉತ್ತರವಿರುವುದಿಲ್ಲ.

ಯಾವುದೇ ದೇಶವು ಅಭಿವೃದ್ಧಿಯಾಗಬೇಕೆಂದರೆ ಅಲ್ಲಿನ ರಸ್ತೆಗಳು ಮುಖ್ಯವಂತೆ. ಅದೇ ರೀತಿ ಯಾವುದೇ ದೇಶ ಖ್ಯಾತಿಗಳಿಸಬೇಕೆಂದರೆ, ಅಲ್ಲಿನ ಪ್ರವಾಸೋದ್ಯಮ ಮುಖ್ಯಪಾತ್ರ ವಹಿಸುತ್ತದೆ. ಏಕೆಂದರೆ, ಕೈಗಾರಿಕೆ, ಬಂಡವಾಳ ಹೂಡಿಕೆ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ಶಕ್ತಿಶಾಲಿಯಾದರೂ ಆ ಕ್ಷೇತ್ರವು ಮಾತ್ರ ಆಕರ್ಷಣೆಯಾಗುತ್ತದೆ.

ಆದರೆ ಪ್ರವಾಸಿ ತಾಣಗಳಿದ್ದರೆ, ಎಲ್ಲ ವರ್ಗದವರನ್ನು ಆಕರ್ಷಿಸುತ್ತದೆ. ಅಭಿವೃದ್ಧಿ ಹೊಂದಿದ ಯಾವುದೇ ದೇಶವನ್ನು ಅಲ್ಲಿನ ಪ್ರವಾಸಿ ತಾಣಗಳಿಂದ ವಿಶ್ವದ ಜನ ಗುರುತಿಸುತ್ತಾರೆ. ಭಾರತದ ರಾಜಧಾನಿ ದೆಹಲಿ ಎನ್ನುವುದು ಎಷ್ಟೋ ಜನರಿಗೆ ತಿಳಿದಿರುವುದಿಲ್ಲ. ಆದರೆ ದೆಹಲಿಯ 230 ಕಿಮೀ ದೂರದಲ್ಲಿರುವ ಆಗ್ರಾವನ್ನು ಇಡೀ ವಿಶ್ವ ಗುರುತಿಸುತ್ತದೆ. ಆಗ್ರಾದ ತಾಜ್‌ಮಹಲ್ ಬಹುತೇಕರ ಕಣ್ಣಲ್ಲಿ ಕಟ್ಟಿರುತ್ತದೆ.

ಅದು ಪ್ರವಾಸಿ ತಾಣಗಳಿಗೆ ಇರುವ ತಾಕತ್ತು. ವಿಶ್ವದ ಶೇ.60ಕ್ಕೂ ಹೆಚ್ಚು ರಾಷ್ಟ್ರಗಳ ಜಿಡಿಪಿಯೂ ಪ್ರವಾಸೋದ್ಯಮದ ಮೇಲೆಯೇ ನಿಂತಿದೆ. ಭಾರತದಲ್ಲಿಯೂ ಕೇರಳ, ಗೋವಾ, ಈಶಾನ್ಯ ರಾಜ್ಯಗಳು ಪ್ರವಾಸೋದ್ಯಮವನ್ನೇ ಅವಲಂಬಿಸಿವೆ. ಈ ಪ್ರಮಾಣದಲ್ಲಿ ಬೇಡಿಕೆ ಇರುವ ಪ್ರವಾಸೋದ್ಯಮ ಕ್ಷೇತ್ರದ ಬಗ್ಗೆ ಕರ್ನಾಟಕದಲ್ಲಿ ಮೊದಲಿನಿಂದಲೂ ಅದೊಂದು ರೀತಿಯ ತಾತ್ಸಾರ ಭಾವನೆಯಿದೆ ಎಂದರೂ ತಪ್ಪಾಗುವುದಿಲ್ಲ.

ಯಾವುದೇ ಸರಕಾರಗಳು ಅಧಿಕಾರಕ್ಕೆ ಬಂದರೂ ಪ್ರವಾಸೋದ್ಯಮ ಇಲಾಖೆಯು ಒಂದು ರೀತಿಯಲ್ಲಿ ಯಾರಿಗೂ ಬೇಡವಾದ ಇಲಾಖೆಯಾಗಿರುತ್ತದೆ. ಯಾವುದೇ ಸಚಿವರಿಗೆ ಈ ಇಲಾಖೆಯನ್ನು ಕೊಟ್ಟರೂ ಆರಂಭದಲ್ಲಿ ಕೊಸರಾಟದಲ್ಲಿಯೇ ಅಧಿಕಾರ ವಹಿಸಿಕೊಳ್ಳುತ್ತಾರೆ. ಈ ರೀತಿ ಅಧಿಕಾರ ವಹಿಸಿಕೊಂಡಿರುವ ಬಹುತೇಕ ಸಚಿವರು, ತಮ್ಮ ಕಾಲಾವಧಿಯಲ್ಲಿ ಪ್ರವಾಸೋದ್ಯಮ ನೀತಿಯ ಹೊರತಾಗಿ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂದರೆ ಅದಕ್ಕೆ ಉತ್ತರವಿರುವುದಿಲ್ಲ.


ಇದು ಕೇವಲ ಅಧಿಕಾರ ವಹಿಸಿಕೊಳ್ಳುವ ಸಚಿವರ ತಪ್ಪಲ್ಲ. ಯಾವುದೇ ಸರಕಾರವಾದರೂ ಪ್ರವಾಸೋದ್ಯಮಕ್ಕೆ 500 ಕೋಟಿ ರುಪಾಯಿ ಒಳಗೆ ಬಜೆಟ್ ಮೀಸಲಿಡುತ್ತದೆ.

ಪ್ರವಾಸೋದ್ಯಮವನ್ನು ಬೂಸ್ಟ್ ಮಾಡುವುದಕ್ಕೆ ಅಗತ್ಯವಿರುವ ಸಾರಿಗೆ ಸಂಪರ್ಕ, ಮೂಲ ಸೌಕರ್ಯ ವ್ಯವಸ್ಥೆಗೆ ಒತ್ತುನೀಡುವ ಬಗ್ಗೆ ಬಹುತೇಕರು ಆಲೋಚಿಸುವುದಿಲ್ಲ ಎನ್ನುವುದು ವಾಸ್ತವ. ಹಾಗೆಂದ ಮಾತ್ರಕ್ಕೆ ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ಅವಕಾಶವಿಲ್ಲ ಎಂದಲ್ಲ. ಕರ್ನಾಟಕದಲ್ಲಿ ಮರುಭೂಮಿ ಪ್ರವಾಸೋದ್ಯಮ ಹೊರತಾಗಿ ಇನ್ನುಳಿದ ಎಲ್ಲ ರೀತಿಯ ಪ್ರವಾಸೋದ್ಯಮಕ್ಕೆ ಅವಕಾಶವಿದೆ.

ಕಡಲತೀರದ ಪ್ರವಾಸೋದ್ಯಮ, ಧಾರ್ಮಿಕ ಪ್ರವಾಸೋದ್ಯಮ, ವನ್ಯಜೀವಿ ಪ್ರವಾಸೋದ್ಯಮ, ಜಲಪಾತಗಳ ಪ್ರವಾಸೋದ್ಯಮ, ಪ್ರಕೃತಿ ಪ್ರವಾಸೋದ್ಯಮ ಸೇರಿದಂತೆ ವಿವಿಧ ರೀತಿಯ ಮತ್ತು ಹತ್ತು ಹಲವು ಆಯಾಮಗಳ ಪ್ರವಾಸೋದ್ಯಮ ಕರ್ನಾಟಕದಲ್ಲಿದೆ. ಆದರೆ ಅದನ್ನು ವಿಶ್ವಕ್ಕೆ ತೋರಿಸಬೇಕಿರುವ ವಿಷಯದಲ್ಲಿ ಕರ್ನಾಟಕ ಹಿಂದೆ ಬಿದ್ದಿದೆ ಎನ್ನುವುದು ವಿಪರ್ಯಾಸ.

ಕರೋನಾ ಬಳಿಕ ಹೆಚ್ಚಾಗಿರುವ ವೈಲ್ಡ್‌ಲೈಫ್ ಸಫಾರಿಗೆ ಕರ್ನಾಟಕದಲ್ಲಿ ಹಲವು ಅವಕಾಶವಿದ್ದರೂ, ಅದನ್ನು ಬಳಸಿಕೊಳ್ಳಲು ಹಿಂದೆ ಬಿದ್ದಿದ್ದೇವೆ ಎನ್ನುವುದು ಹಲವರ ಮಾತಾಗಿದೆ. ಆದರೀಗ ಅದರ ಮುಂದುವರಿದ ಭಾಗವಾಗಿ ವಿಶ್ವವಿಖ್ಯಾತ ಬಂಡೀಪುರ ಹಾಗೂ ಕಬಿನಿ ಭಾಗದಲ್ಲಿಯೂ ಸಫಾರಿಯನ್ನು ನಿರ್ಬಂಧಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಮೂರು ತಿಂಗಳ ಹಿಂದೆ ಹೆಡಿಯಾಳ ಅರಣ್ಯ ಪ್ರದೇಶದಲ್ಲಿ ಹುಲಿಗಳು ಮಾನವರ ಮೇಲೆ ದಾಳಿ ಮಾಡಿವೆ ಎನ್ನುವ ಕಾರಣಕ್ಕೆ, ಸಫಾರಿಯನ್ನು ನಿರ್ಬಂಧಿಸಿ ಅರಣ್ಯ ಇಲಾಖೆ ಆದೇಶ ಹೊರಡಿಸಿತ್ತು. ಆದರೆ ಸಫಾರಿಗೂ, ಈ ದಾಳಿಗಳಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಈ ರೀತಿಯ ನಿರ್ಬಂಧದಿಂದ ಕರ್ನಾಟಕದ ಇಡೀ ಪ್ರವಾಸೋದ್ಯಮಕ್ಕೆ ಪೆಟ್ಟುಬಿದ್ದಿದೆ.



ಸಫಾರಿ ನಿರ್ಬಂಧದಿಂದ ಕಬಿನಿ, ಬಂಡೀಪುರ ಸುತ್ತಮುತ್ತಲಿನ ರೆಸಾರ್ಟ್‌ಗಳಲ್ಲಿ ಪ್ರವಾಸಿಗರ ಸಂಖ್ಯೆ ಶೂನ್ಯಕ್ಕೆ ಬಂದಿಳಿದಿದೆ. ಇದರಿಂದ ಜರ್ಜರಿತರಾಗಿರುವ ಮಾಲೀಕರು ಸಫಾರಿ ಪುನರಾರಂಭಿಸದಿದ್ದರೆ ರೆಸಾರ್ಟ್‌ಗಳನ್ನು ಮುಚ್ಚಬೇಕಾದ ಪರಿಸ್ಥಿತಿಗೆ ಬಂದಿದ್ದಾರೆ. ಬಂಡೀಪುರ, ಕಬಿನಿ ಭಾಗದಲ್ಲಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಕುಟುಂಬದ ಬದುಕು ಈ ರೆಸಾರ್ಟ್, ಹೋಮ್ ಸ್ಟೇಗಳ ಮೇಲೆ ನಿಂತಿದೆ.

ಅವೈಜ್ಞಾನಿಕವಾಗಿ ಸ್ಥಗಿತಗೊಳಿಸಿರುವ ಸಫಾರಿಯನ್ನು ಆರಂಭಿಸದಿದ್ದರೆ, ಮುಂದಿನ ದಿನದಲ್ಲಿ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸಬೇಕಾದ ಹಾಗೂ ರೆಸಾಟ್‌ಗಳನ್ನು ಮುಚ್ಚಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಹೀಗಾದರೆ, 10 ಸಾವಿರಕ್ಕೂ ಹೆಚ್ಚು ಜನರು, ಎರಡು ಸಾವಿರಕ್ಕೂ ಹೆಚ್ಚು ಕುಟುಂಬಗಳು ಬೀದಿಗೆ ಬರುವುದು ನಿಶ್ಚಿತ ಎನ್ನುವುದು ಸತ್ಯ.

ಹಾಗೆ ನೋಡಿದರೆ, ಹುಲಿಗಳು ವಾಸಿಸುವ ಕಾಡಿನ ಅಂಚಿನಲ್ಲಿ, ಅಭಯಾರಣ್ಯಗಳಲ್ಲಿ ಈ ರೀತಿಯ ದಾಳಿಗಳು ಹೊಸದೇನಲ್ಲ. ಉತ್ತರಾಖಂಡದಲ್ಲಿರುವ ಕಾರ್ಬೆಟ್, ರಾಜಸ್ಥಾನದಲ್ಲಿರುವ ರಣತಂಬೋರ್, ಮಧ್ಯಪ್ರದೇಶದ ಕನ್ಹಾ, ಪಶ್ಚಿಮ ಬಂಗಾಳದಲ್ಲಿರುವ ಸುಂದರ್‌ಬನ್ ಕಾಡುಗಳಲ್ಲಿ ಕರ್ನಾಟಕದಲ್ಲಿನ ದಾಳಿಗಿಂತ ಹೆಚ್ಚಾಗಿಯೇ ಹುಲಿ ದಾಳಿಗಳಾಗುತ್ತಿವೆ. ಆದರೆ ಎಂದಿಗೂ ಅಲ್ಲಿ ಸಫಾರಿಗಳನ್ನು ನಿಲ್ಲಿಸಿಲ್ಲ. ಅದರಲ್ಲಿಯೂ ಕರ್ನಾಟಕದಲ್ಲಿ ಆಗಿರುವ ಹುಲಿಗಳ ದಾಳಿಗೂ ಸಫಾರಿಗೂ ಸಂಬಂಧವೇ ಇಲ್ಲ.

ಆದರೂ, ನಿರ್ಬಂಧಿಸಿರುವುದು ಏಕೆ ಎನ್ನುವುದಕ್ಕೆ ಸರಕಾರದ ಬಳಿ ಉತ್ತರವಿಲ್ಲ. ಅರಣ್ಯ ಇಲಾಖೆಯ ಈ ತೀರ್ಮಾನವನ್ನು ಪ್ರಶ್ನಿಸಬೇಕಿದ್ದ ಪ್ರವಾಸೋದ್ಯಮ ಇಲಾಖೆ ಮೌನವಾಗಿದೆ. ಆದರೆ ಈ ಮೌನದಿಂದ ಕರ್ನಾಟಕದ ಬೊಕ್ಕಸಕ್ಕೆ ಬಹುದೊಡ್ಡ ನಷ್ಟವಾಗುತ್ತಿದೆ ಎನ್ನುವುದನ್ನು ಯಾರೂ ಅರ್ಥ ಮಾಡಿಕೊಳ್ಳುತ್ತಿಲ್ಲ.

ಅಂಕಿ-ಅಂಶಗಳ ಪ್ರಕಾರ, ಬಂಡೀಪುರ-ನಾಗರಹೊಳೆ ಸಫಾರಿಯಿಂದಲೇ ನಿತ್ಯ 25 ಲಕ್ಷಕ್ಕೂ ಹೆಚ್ಚು ಆದಾಯ ಬರುತ್ತಿತ್ತು. ಅಂದರೆ ತಿಂಗಳಿಗೆ ಕನಿಷ್ಠ 7.5 ಕೋಟಿ ರು. ಆದಾಯವಿತ್ತು. ಕಳೆದ ಮೂರು ತಿಂಗಳಿನಿಂದ ಸಫಾರಿ ಸ್ಥಗಿತವಾಗಿರುವುದರಿಂದ ಕನಿಷ್ಠ ಎಂಟು ಕೋಟಿ ಆದಾಯ ನಷ್ಟವಾಗಿದೆ. ಇದರೊಂದಿಗೆ ಈ ಭಾಗದಲ್ಲಿರುವ ರೆಸಾಟ್‌ಗಳು, ಹೋಂ ಸ್ಟೇಗಳು ಪ್ರವಾಸಿಗರಿಲ್ಲದೆ ಭಾರಿ ನಷ್ಟ ಅನುಭವಿಸುತ್ತಿವೆ.

ಇದು ಹೀಗೇ ಮುಂದುವರಿದರೆ ಈ ರೆಸಾರ್ಟ್‌ಗಳು ಮುಚ್ಚುವ ಸ್ಥಿತಿಗೆ ಬರಲಿದೆ. ಇದಿಷ್ಟೇ ಅಲ್ಲದೆ, ಕರ್ನಾಟಕದ ಪ್ರವಾಸೋದ್ಯಮ ಸಂಸ್ಕೃತಿ ಮರೆಯಾದರೆ, ಮರುಸ್ಥಾಪಿಸುವುದು ತೀರಾ ಕಷ್ಟದ ಕೆಲಸ. ಬಂಡೀಪುರ, ಕಬಿನಿಗೆ ಆಗಮಿಸುವ ವಿದೇಶಿಗರಿಂದಲೇ ಕರ್ನಾಟಕದಲ್ಲಿ ವಾರ್ಷಿಕವಾಗಿ ಸರಾಸರಿ 125 ಕೋಟಿ ರು. ವಹಿವಾಟು ಆಗುತ್ತಿತ್ತು. ಆದರೆ ಇದೀಗ ಕರ್ನಾಟಕದಲ್ಲಿ ಈ ಸಫಾರಿ ಇಲ್ಲವೆಂದು ನೆರೆಯ ಕೇರಳದ ವಯನಾಡು, ತಮಿಳುನಾಡಿನ ಮಧುಮಲೈಗೆ ಅನೇಕ ವಿದೇಶಿಗರು ಮುಖ ಮಾಡಿದ್ದಾರೆ.

ಇದು ಭವಿಷ್ಯದ ಕರ್ನಾಟಕ ಪ್ರವಾಸೋದ್ಯಮದ ದೃಷ್ಟಿಯಿಂದ ಭಾರಿ ಹೊಡೆತ ಎನ್ನುವುದು ಸ್ಪಷ್ಟ. ಬಂಡೀಪುರ ನಾಗರಹೊಳೆ ಸಫಾರಿಯನ್ನು ನಿರ್ಬಂಧಿಸಿರುವ ಅರಣ್ಯ ಇಲಾಖೆಯ ದೃಷ್ಟಿಯಲ್ಲಿ ಈ ಸಫಾರಿ ಮಾತ್ರ ನಿಲ್ಲಿಸಲಾಗಿದೆ. ಆದರೆ ಪ್ರವಾಸೋದ್ಯಮ ಕ್ಷೇತ್ರದ ದೃಷ್ಟಿಯಲ್ಲಿ, ವಿದೇಶಿ ಪ್ರವಾಸಿಗರು, ಉತ್ತರ ಭಾರತದ ಪ್ರವಾಸಿಗರ ದೃಷ್ಟಿಯಲ್ಲಿ ಕರ್ನಾಟಕದ ಇಡೀ ಪ್ರವಾಸೋದ್ಯಮ ಸಮಸ್ಯೆಯಾಗಿದೆ ಎನ್ನುವ ರೀತಿಯಲ್ಲಿದೆ. ಏಕೆಂದರೆ, ವಿದೇಶಗಳಿಂದ ಬರುವುದು ಕೇವಲ ಬಂಡೀಪುರದ ಸಫಾರಿಗೆಂದಲ್ಲ. ತಿಂಗಳ ಲೆಕ್ಕದಲ್ಲಿ ಕರ್ನಾಟಕಕ್ಕೆ ಆಗಮಿಸುವ ವಿದೇಶಿಗರು ಬಂಡೀಪುರಕ್ಕೆ ಬಂದವರು ಮೈಸೂರು, ಹಳೇಬೀಡು-ಪಟ್ಟದಕಲ್ಲು ಅಲ್ಲಿಂದ ಹಂಪಿ, ಬಾದಾಮಿ ಸೇರಿದಂತೆ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ಕೊಟ್ಟು ಆಮೇಲೆ ವಾಪಸಾಗುತ್ತಾರೆ.

ಇದೇ ರೀತಿ ಉತ್ತರ ಭಾರತದಿಂದ ವಾರಗಟ್ಟಲೇ ರಾಜ್ಯಕ್ಕೆ ಆಗಮಿಸುವವರು, ಕೇವಲ ಬಂಡೀಪುರಕ್ಕೆ ಬರುವುದಿಲ್ಲ. ಬದಲಿಗೆ ಬಂಡೀಪುರಕ್ಕೆ ಬಂದು ಇಲ್ಲಿನ ಸಫಾರಿ ವೀಕ್ಷಿಸಿ ಬಳಿಕ ಕರ್ನಾಟಕದ ವಿವಿಧ ಭಾಗಗಳಿಗೆ ಭೇಟಿ ನೀಡುತ್ತಾರೆ. ಆದರೀಗ ಕರ್ನಾಟಕದಲ್ಲಿ ಸಫಾರಿ ಇಲ್ಲ ಎಂದರೆ ಅವರು ಕರ್ನಾಟಕದ ಬದಲಿಗೆ, ಬೇರೆ ರಾಜ್ಯಗಳಿಗೆ ತೆರಳುವ ಸಾಧ್ಯತೆ ಇರುತ್ತದೆ.

ಅದರಲ್ಲಿಯೂ ಬಂಡೀಪುರ ಹಾಗೂ ನಾಗರಹೊಳೆಗೆ ಹೊಂದಿಕೊಂಡಿರುವ ತಮಿಳುನಾಡಿನ ಮಧು ಮಲೈ ಹಾಗೂ ಕೇರಳದ ವಯನಾಡಿಗೆ ಕರ್ನಾಟಕ ಅರಣ್ಯ ಇಲಾಖೆಯ ಅವೈಜ್ಞಾನಿಕ ತೀರ್ಮಾನ ಬಹುದೊಡ್ಡ ಲಾಭವನ್ನು ನೀಡುತ್ತದೆ. ಏಕೆಂದರೆ, ಕರ್ನಾಟಕದಲ್ಲಿ ಸಫಾರಿಗಳು ನಿರ್ಬಂಧವಾದರೂ, ಇದೇ ಅಭಯಾರಣ್ಯದ ಮುಂದುವರಿದ ಭಾಗವಾಗಿರುವ ಮಧುಮಲೈ ಹಾಗೂ ವಯನಾಡಿನಲ್ಲಿ ಸಫಾರಿ ಮುಂದುವರಿದಿದೆ.

ಆದ್ದರಿಂದ ಇಲ್ಲಿಯ ಬದಲು ಅಲ್ಲಿಗೆ ತೆರಳುತ್ತಾರೆ. ನಿರ್ಬಂಧ ಹೀಗೇ ಮುಂದುವರಿದರೆ, ಬಂಡೀಪುರ-ನಾಗರಹೊಳೆಗೆಂದೇ ಬರುವ ಐದು ಸಾವಿರಕ್ಕೂ ಹೆಚ್ಚು ವಿದೇಶಿ ಪ್ರವಾಸಿಗರು ಕೇರಳ, ತಮಿಳು ನಾಡಿನತ್ತ ಮುಖಮಾಡುವುದರಲ್ಲಿ ಸಂದೇಹವಿಲ್ಲ.

ಈ ಆಯಾಮದಲ್ಲಿ ಅರಣ್ಯ ಇಲಾಖೆ ಆಲೋಚಿಸದೆ, ತನ್ನ ಅವೈಜ್ಞಾನಿಕ ತೀರ್ಮಾನಕ್ಕೆ ಈಗಲೂ ಜೋತುಬಿದ್ದಿದೆ. ಹಾಗೆ ನೋಡಿದರೆ, ಅರಣ್ಯ ಇಲಾಖೆಯು ನಿರ್ಬಂಧ ವಿಧಿಸುವ ಬದಲು ಹುಲಿ ದಾಳಿ ಹೆಚ್ಚಾಗಿರುವ ಹೆಡಿಯಾಳ ಭಾಗದಲ್ಲಿ ಹೆಚ್ಚುವರಿ ಅರಣ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಿ, ವನ್ಯಪ್ರಾಣಿ-ಮಾನವ ಸಂಘರ್ಷ ತಡೆಗೆ ಕ್ರಮವಹಿಸಬಹುದಾಗಿತ್ತು. ಆದರೆ ಅದನ್ನು ಮಾಡದೆ ಸಫಾರಿಯನ್ನು ನಿರ್ಬಂಧಿಸಿದ್ದಾರೆ.

ಇದನ್ನು ಪ್ರಶ್ನಿಸಬೇಕಾದ ಪ್ರವಾಸೋದ್ಯಮ ಇಲಾಖೆಯೂ ದಿವ್ಯಮೌನ ವಹಿಸಿದೆ. ರೆಸಾರ್ಟ್ ಮಾಲೀಕರು, ಹೋಂ ಸ್ಟೇ ಮಾಲೀಕರು ಒತ್ತಡ ಹೇರುತ್ತಿದ್ದರೂ, ಅದು ಅರಣ್ಯ ಇಲಾಖೆಯ ಸಚಿವರು, ಅಧಿಕಾರಿಗಳಿಗೆ ಕಿವಿ ಬೀಳುವಷ್ಟು ಗಟ್ಟಿಯಾಗಿಲ್ಲ. ಮುಖ್ಯಮಂತ್ರಿಗಳು ಸಫಾರಿ ಆರಂಭಿಸುವಂತೆ ಸೂಚನೆ ನೀಡಿದರೂ, ಅರಣ್ಯ ಇಲಾಖೆಯವರು ತಾಂತ್ರಿಕ ವರದಿಯ ನೆಪದಲ್ಲಿ ದಿನದೂಡುತ್ತಿದ್ದಾರೆ.

ಹೆಚ್ಚು ಒತ್ತಡ ಹೇರಿದರೆ, ಹುಲಿಗಳ ದಾಳಿಯಿಂದ ಆಗಿರುವ ಸಾವು-ನೋವಿನ ಲೆಕ್ಕವನ್ನು ಲಿಂಕ್ ಮಾಡಿ ಕೈತೊಳೆದುಕೊಳ್ಳುತ್ತಿದ್ದಾರೆ. ಆದರೆ ಹುಲಿ-ಮಾನವ ಸಂಘರ್ಷದ ಬಗ್ಗೆ ಮಾತನಾಡುವ ಬಹುತೇಕ ಅಧಿಕಾರಿಗಳಿಗೆ, ಬಂಡೀಪುರ ಸಫಾರಿಗೂ ಹೆಡಿಯಾಳ ಪ್ರದೇಶಕ್ಕೂ 40 ಕಿ.ಮೀ. ಅಂತರವಿರುವುದು ತಿಳಿದಿಲ್ಲ ಎನ್ನುವುದು ವಾಸ್ತವ!

ಪ್ರವಾಸಿಗಳು ಬಯಸುವ ವಿಭಿನ್ನ ಪ್ರವಾಸೋದ್ಯಮ ವಿಷಯದಲ್ಲಿ ಕರ್ನಾಟಕವು ಇತರೆ ರಾಜ್ಯವಷ್ಟೇ ಅಲ್ಲದೆ, ಹಲವು ದೇಶಗಳಿಗಿಂತ ಮುಂದಿದೆ. ಆದರೆ ಇವುಗಳನ್ನು ಯಾವ ರೀತಿ ಬಳಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಪ್ರವಾಸಿಗರ ಸಂಖ್ಯೆ, ಅದರಿಂದಾಗುವ ಲಾಭ-ನಷ್ಟಗಳು ತೀರ್ಮಾನವಾಗುತ್ತದೆ.

ಆದರೆ ಪ್ರವಾಸೋದ್ಯಮವನ್ನು ಆದ್ಯತಾ ವಲಯವನ್ನಾಗಿಯೇ ಮಾಡಿಕೊಳ್ಳದೆ, ಪ್ರವಾಸೋದ್ಯಮ ಇಲಾಖೆಯನ್ನು ಹೆಚ್ಚುವರಿ ಹೊಣೆಗಾರಿಕೆಯ ರೀತಿಯಲ್ಲಿ ಹಂಚಿಕೆ ಮಾಡಿ, ಸರಕಾರಗಳು ಬದಲಾದಂತೆ ಒಂದೊಂದು ನೀತಿ ಮಾಡುವುದರಿಂದ ಬಹುದೊಡ್ಡ ಲಾಭವಾಗುತ್ತದೆ ಎನಿಸುವುದಿಲ್ಲ.

ಇನ್ನಾದರೂ ಕರ್ನಾಟಕ ಸರಕಾರಕ್ಕೆ ಪ್ರವಾಸೋದ್ಯಮ ಆದ್ಯತಾ ಕ್ಷೇತ್ರವಾಗಲಿ. ಸದ್ಯ ಟ್ರೆಂಡ್‌ನಲ್ಲಿರುವ ಇಕೋ-ಟೂರಿಸಂ ಬೆಳೆಸುವುದಕ್ಕೆ ಇನ್ನ್ಯಾವುದೋ ನೀತಿ ಜಾರಿಗೊಳಿಸುವುದಕ್ಕಿಂತ, ಯಾರದ್ದೋ ಒತ್ತಡಕ್ಕೆ ಮಣಿದು ಅವೈಜ್ಞಾನಿಕ ಕಾರಣ ನೀಡಿ ಸ್ಥಗಿತಗೊಳಿಸಿರುವ ಬಂಡೀಪುರ ಹಾಗೂ ನಾಗರಹೊಳೆ ಸಫಾರಿಗಳನ್ನು ಪುನರಾರಂಭಿಸಬೇಕು.

ಇದನ್ನು ಮಾಡದೆ, ತಾಂತ್ರಿಕ ಸಮಿತಿಯ ವರದಿ, ರೈತರ ಸಂಘದ ವಿರೋಧ ಮತ್ತೊಂದು ಮಗದೊಂದು ಎಂದುಕೊಂಡು ಸಮಯ ಕಳೆಯುತ್ತ ಕೂತರೆ, ಕರ್ನಾಟಕದ ವಿಷಯದಲ್ಲಿ ದೇಶ-ವಿದೇಶದಲ್ಲಿರುವ ಪ್ರವಾಸಿ ಸಂಸ್ಕೃತಿಯ ಆಸಕ್ತಿ ಕಡಿಮೆಯಾಗಲಿದೆ. ಒಮ್ಮೆ ಈ ರೀತಿಯಾದರೆ ಇದನ್ನು ಸರಿಪಡಿಸಲು ದಶಕಗಳೇ ಬೇಕಾಗುತ್ತವೆ ಎನ್ನುವುದು ವಾಸ್ತವ. ಆದ್ದರಿಂದ ಅರಣ್ಯ ಇಲಾಖೆಯ ಈ ಅವೈಜ್ಞಾನಿಕ ತೀರ್ಮಾನಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆ ಹಾಗೂ ಸಚಿವಾಲಯಗಳು ಇನ್ನಾದರೂ ಧ್ವನಿ ಎತ್ತಬೇಕಿದೆ. ಇಲ್ಲದೆ ಹೋದರೆ, ಕರ್ನಾಟಕದ ಪ್ರವಾಸೋದ್ಯಮಕ್ಕಿರುವ ಛಾಪು ತಗ್ಗುವುದರಲ್ಲಿ ಅನುಮಾನವಿಲ್ಲ.

- ರಂಜಿತ್ ಎಚ್ ಅಶ್ವತ್ಥ್



> ಪ್ರವಾಸೋದ್ಯಮವನ್ನು ಬೂಸ್ಟ್ ಮಾಡುವುದಕ್ಕೆ ಅಗತ್ಯವಿರುವ ಸಾರಿಗೆ ಸಂಪರ್ಕ, ಮೂಲ ಸೌಕರ್ಯ ವ್ಯವಸ್ಥೆಗೆ ಒತ್ತುನೀಡುವ ಬಗ್ಗೆ ಬಹುತೇಕರು ಆಲೋಚಿಸುವುದಿಲ್ಲ ಎನ್ನುವುದು ವಾಸ್ತವ. ಕರ್ನಾಟಕದಲ್ಲಿ ಮರುಭೂಮಿ ಪ್ರವಾಸೋದ್ಯಮ ಹೊರತಾಗಿ ಇನ್ನುಳಿದ ಎಲ್ಲ ರೀತಿಯ ಪ್ರವಾಸೋದ್ಯಮಕ್ಕೆ ಅವಕಾಶವಿದೆ. ಕಡಲತೀರದ ಪ್ರವಾಸೋದ್ಯಮ, ಧಾರ್ಮಿಕ ಪ್ರವಾಸೋದ್ಯಮ, ವನ್ಯಜೀವಿ ಪ್ರವಾಸೋದ್ಯಮ, ಜಲಪಾತಗಳ ಪ್ರವಾಸೋದ್ಯಮ, ಪ್ರಕೃತಿ ಪ್ರವಾಸೋದ್ಯಮ ಸೇರಿದಂತೆ ವಿವಿಧ ರೀತಿಯ ಮತ್ತು ಹತ್ತು ಹಲವು ಆಯಾಮಗಳ ಪ್ರವಾಸೋದ್ಯಮ ಕರ್ನಾಟಕದಲ್ಲಿದೆ. ಆದರೆ ಅದನ್ನು ವಿಶ್ವಕ್ಕೆ ತೋರಿಸಬೇಕಿರುವ ವಿಷಯದಲ್ಲಿ ಕರ್ನಾಟಕ ಹಿಂದೆ ಬಿದ್ದಿದೆ ಎನ್ನುವುದು ವಿಪರ್ಯಾಸ.

### ಇದು ಹೀಗೇ ಮುಂದುವರಿದರೆ.....

- ಈ ರೆಸಾರ್ಟ್‌ಗಳು ಮುಚ್ಚುವ ಸ್ಥಿತಿಗೆ ಬರಲಿದೆ.
- ಇದಿಷ್ಟೇ ಅಲ್ಲದೆ, ಕರ್ನಾಟಕದ ಪ್ರವಾಸೋದ್ಯಮ ಸಂಸ್ಕೃತಿ ಮರೆಯಾದರೆ, ಮರುಸ್ಥಾಪಿಸುವುದು ತೀರಾ ಕಷ್ಟದ ಕೆಲಸ.
- ಬಂಡೀಪುರ, ಕಬಿನಿಗೆ ಆಗಮಿಸುವ ವಿದೇಶಿಗರಿಂದಲೇ ಕರ್ನಾಟಕದಲ್ಲಿ ವಾರ್ಷಿಕವಾಗಿ ಸರಾಸರಿ 125 ಕೋಟಿ ರು. ವಹಿವಾಟು ಆಗುತ್ತಿತ್ತು.
- ಆದರೆ ಇದೀಗ ಕರ್ನಾಟಕದಲ್ಲಿ ಈ ಸಫಾರಿ ಇಲ್ಲವೆಂದು ನೆರೆಯ ಕೇರಳದ ವಯನಾಡು, ತಮಿಳುನಾಡಿನ ಮಧುಮಲೈಗೆ ಅನೇಕ ವಿದೇಶಿಗರು ಮುಖ ಮಾಡಿದ್ದಾರೆ.
- ಇದು ಭವಿಷ್ಯದ ಕರ್ನಾಟಕ ಪ್ರವಾಸೋದ್ಯಮದ ದೃಷ್ಟಿಯಿಂದ ಭಾರಿ ಹೊಡೆತ ಎನ್ನುವುದು ಸ್ಪಷ್ಟ.
- ಬಂಡೀಪುರ ನಾಗರಹೊಳೆ ಸಫಾರಿಯನ್ನು ನಿರ್ಬಂಧಿಸಿರುವ ಅರಣ್ಯ ಇಲಾಖೆಯ ದೃಷ್ಟಿಯಲ್ಲಿ ಈ ಸಫಾರಿ ಮಾತ್ರ ನಿಲ್ಲಿಸಲಾಗಿದೆ.
- ಆದರೆ ಪ್ರವಾಸೋದ್ಯಮ ಕ್ಷೇತ್ರದ ದೃಷ್ಟಿಯಲ್ಲಿ, ವಿದೇಶಿ ಪ್ರವಾಸಿಗರು, ಉತ್ತರ ಭಾರತದ ಪ್ರವಾಸಿಗರ ದೃಷ್ಟಿಯಲ್ಲಿ ಕರ್ನಾಟಕದ ಇಡೀ ಪ್ರವಾಸೋದ್ಯಮ ಸಮಸ್ಯೆಯಾಗಿದೆ ಎನ್ನುವ ರೀತಿಯಲ್ಲಿದೆ.
- ಏಕೆಂದರೆ, ವಿದೇಶಗಳಿಂದ ಬರುವುದು ಕೇವಲ ಬಂಡೀಪುರದ ಸಫಾರಿಗೆಂದಲ್ಲ.
- ತಿಂಗಳ ಲೆಕ್ಕದಲ್ಲಿ ಕರ್ನಾಟಕಕ್ಕೆ ಆಗಮಿಸುವ ವಿದೇಶಿಗರು ಬಂಡೀಪುರಕ್ಕೆ ಬಂದವರು ಮೈಸೂರು, ಹಳೇಬೀಡು-ಪಟ್ಟದಕಲ್ಲು ಅಲ್ಲಿಂದ ಹಂಪಿ, ಬಾದಾಮಿ ಸೇರಿದಂತೆ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ಕೊಟ್ಟು ಆಮೇಲೆ ವಾಪಸಾಗುತ್ತಾರೆ.
- ಇದೇ ರೀತಿ ಉತ್ತರ ಭಾರತದಿಂದ ವಾರಗಟ್ಟಲೇ ರಾಜ್ಯಕ್ಕೆ ಆಗಮಿಸುವವರು, ಕೇವಲ ಬಂಡೀಪುರಕ್ಕೆ ಬರುವುದಿಲ್ಲ.
- ಬದಲಿಗೆ ಬಂಡೀಪುರಕ್ಕೆ ಬಂದು ಇಲ್ಲಿನ ಸಫಾರಿ ವೀಕ್ಷಿಸಿ ಬಳಿಕ ಕರ್ನಾಟಕದ ವಿವಿಧ ಭಾಗಗಳಿಗೆ ಭೇಟಿ ನೀಡುತ್ತಾರೆ.
- ಆದರೀಗ ಕರ್ನಾಟಕದಲ್ಲಿ ಸಫಾರಿ ಇಲ್ಲ ಎಂದರೆ ಅವರು ಕರ್ನಾಟಕದ ಬದಲಿಗೆ, ಬೇರೆ ರಾಜ್ಯಗಳಿಗೆ ತೆರಳುವ ಸಾಧ್ಯತೆ ಇರುತ್ತದೆ.

# ಇರುವುದೇ ಸ್ವಲ್ಪ ಜಾಗ, ಅಲ್ಲೂ ಸಫಾರಿ ನಿರ್ಬಂಧ!

**» ಬಂಡೀಪುರ ಸಫಾರಿ ಸುಮಾರು 15 ರಿಂದ 20 ಕಿಮೀ ಇದ್ದರೆ, ನಾಗರಹೊಳೆಯದ್ದು 12ರಿಂದ 18 ಕಿಮೀ ಇದೆ. ಒಂದು ಸುತ್ತಿನಲ್ಲಿ ಈ ದೂರವನ್ನು ಕ್ರಮಿಸುವುದರಿಂದ ಕಾಡಿನ ಆರೇಳು ಕಿಮೀ ಭಾಗದಲ್ಲಿ ಮಾತ್ರ ಸಫಾರಿ ವಾಹನಗಳು ಹೋಗುತ್ತವೆ. ಅದರ ಆಚೆಗೆ ಈಗಲೂ ಪ್ರವಾಸಿಗರಿಗೆ ಅವಕಾಶವಿಲ್ಲ. ಇದನ್ನು ಗಣಿಸದೇ, ಇನ್ನೊಂದು ಭಾಗದಲ್ಲಿ ಆಗಿರುವ ಹುಲಿ ದಾಳಿಗೆ ಸಫಾರಿಯನ್ನು ಲಿಂಕ್ ಮಾಡುತ್ತಿರುವುದು ಸರಿಯಲ್ಲ ಎಂಬ ಆಕ್ರೋಶ ಕೇಳಿಸಿದೆ.**

ಶೇ.20 ಅರಣ್ಯ ಪ್ರದೇಶ ಸಫಾರಿಗೆ ಬಳಸಬಹುದು ರಾಜ್ಯದಲ್ಲಿ ಬಳಸುತ್ತಿರುವುದು ಶೇ.6 ಕಾಡು ಮಾತ್ರ

ದೇಶದ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಸಫಾರಿಗೆಂದು ಪ್ರವಾಸೋದ್ಯಮ ಇಲಾಖೆ ಹೆಚ್ಚು ಕಾಡನ್ನು ಬಳಸಿಕೊಂಡಿಲ್ಲ. ಆದರೂ ಸಫಾರಿ ನಿರ್ಬಂಧಿಸುವ ಶಿಕ್ಷೆ ಏಕೆ ಎನ್ನುವ ಪ್ರಶ್ನೆಗಳಿವೆ. ಕೇಂದ್ರ ಅರಣ್ಯ ಇಲಾಖೆಯ ಕಾಯಿದೆ, ಸುಪ್ರೀಮ್ ಕೋರ್ಟ್‌ನ ಹಲವು ತೀರ್ಪುಗಳಲ್ಲಿ ಒಟ್ಟು ಕಾಡಿನ ಶೇ.20ರಷ್ಟು ಪ್ರದೇಶವನ್ನು ಸಫಾರಿ, ಪ್ರವಾಸೋದ್ಯಮ, ರೆಸಾರ್ಟ್‌ಗಳಿಗೆ ಬಳಸಿಕೊಳ್ಳಲು ಅವಕಾಶವಿದೆ. ಆದರೆ ಕರ್ನಾಟಕದಲ್ಲಿ ಶೇ.6-7ರಷ್ಟು ಅರಣ್ಯ ಪ್ರದೇಶವನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಇನ್ನುಳಿದ ಪ್ರದೇಶಕ್ಕೆ ಈಗಲೂ ಪ್ರವಾಸಿಗರ ಪ್ರವೇಶಕ್ಕೆ ಅವಕಾಶವಿಲ್ಲ.

ಬಂಡೀಪುರ ಸಫಾರಿ ಸುಮಾರು 15 ರಿಂದ 20 ಕಿಮೀ ಇದ್ದರೆ, ನಾಗರಹೊಳೆಯದ್ದು 12ರಿಂದ 18 ಕಿಮೀ ಇದೆ. ಒಂದು ಸುತ್ತಿನಲ್ಲಿ ಈ ದೂರವನ್ನು ಕ್ರಮಿಸುವುದರಿಂದ ಕಾಡಿನ ಆರೇಳು ಕಿಮೀ ಭಾಗದಲ್ಲಿ ಮಾತ್ರ ಸಫಾರಿ ವಾಹನಗಳು ಹೋಗುತ್ತವೆ. ಅದರ ಆಚೆಗೆ ಈಗಲೂ ಪ್ರವಾಸಿಗರಿಗೆ ಅವಕಾಶವಿಲ್ಲ. ಇದನ್ನು ಗಣಿಸದೇ, ಇನ್ನೊಂದು ಭಾಗದಲ್ಲಿ ಆಗಿರುವ ಹುಲಿ ದಾಳಿಗೆ ಸಫಾರಿಯನ್ನು ಲಿಂಕ್ ಮಾಡುತ್ತಿರುವುದು ಸರಿಯಲ್ಲ ಎಂಬ ಆಕ್ರೋಶ ಕೇಳಿಸಿದೆ.

ಹುಲಿಗಳ ದಾಳಿಗೆ ನೂರಾರು ಕಾರಣಗಳಿವೆ. ಪ್ರಮುಖವಾಗಿ ಅರಣ್ಯ ಪ್ರದೇಶ, ಅರಣ್ಯದೊಳಗೆ ಇಲಾಖೆಯಿಂದ ಅವೈಜ್ಞಾನಿಕವಾಗಿ ಮಾಡುತ್ತಿರುವ ಅಭಿವೃದ್ಧಿ ಕಾಮಗಾರಿ, ಕಾಡಿನಂಚಿನ ಗ್ರಾಮಸ್ಥರ ಪ್ರಚೋದನೆ ಸೇರಿದಂತೆ ವಿವಿಧ ಕಾರಣಗಳಿಂದಾಗಿ ದಾಳಿಗಳು ಹೆಚ್ಚಾಗಿವೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬದಲು ಅರಣ್ಯ ಇಲಾಖೆ, ಕಾಡು ಉಳಿಸುವಲ್ಲಿ ಪ್ರಮುಖ ಪಾತ್ರವಹಿಸುವ ವೈಲ್ಡ್ ಲೈಫ್ ಟೂರಿಸಂ ಅನ್ನೇ ನಿರ್ಬಂಧಿಸಿರುವುದು ವಿವಾದ ಹುಟ್ಟಿಸಿದೆ.

**ಗೋಮಾಳಗಳೆಲ್ಲ ಕಬ್ಜ:** ಮನುಷ್ಯರ ಮೇಲೆ ಆಗುತ್ತಿರುವ ಹುಲಿ ದಾಳಿ ಕೇವಲ ಕರ್ನಾಟಕದ ಸಮಸ್ಯೆಯಲ್ಲ. ಭಾರತದ ಹಲವು ಭಾಗದಲ್ಲಿ ಈ ರೀತಿ ದಾಳಿಗಳು ವರದಿಯಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ, ಇಂದಿರಾ ಗಾಂಧಿ ಅವರ ಕಾಲದಲ್ಲಿ ಹುಲಿ ಸಂರಕ್ಷಣಾ ಕಾಯಿದೆ ಜಾರಿಗೊಳಿಸಿದ ಬಳಿಕ ಹುಲಿಗಳ ಬೇಟೆ ಕಡಿಮೆಯಾಗುವುದರೊಂದಿಗೆ, ಹುಲಿಗಳ ಜನನ ಪ್ರಮಾಣ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಿದೆ. ಆದರೆ ಹುಲಿಗಳಿಗೆ ಬೇಕಿರುವಷ್ಟು ಅರಣ್ಯ ಪ್ರದೇಶವಿಲ್ಲ.

ಜಾನುವಾರುಗಳನ್ನು ಮೇಯಿಸುವುದಕ್ಕೆ ಕಾಡಿಗೆ ಬಿಡಬಾರದು ಎನ್ನುವ ಸೂಚನೆ ಇದ್ದರೂ, ಅನೇಕ ರೈತರು ಈಗಲೂ ಕಾಡಿಗೆ ಬಿಡುತ್ತಿದ್ದಾರೆ. ಇದರಿಂದ ಹುಲಿಗಳು ದಾಳಿ ಮಾಡುತ್ತಿವೆ. ಈ ದಾಳಿಯ ಸಲುವಾಗಿ ಮಾನವ-ಹುಲಿ ಸಂಘರ್ಷವನ್ನು ತಡೆಯಲು, ಇದಕ್ಕೆ ಸಂಬಂಧವಿಲ್ಲದ ಸಫಾರಿಯನ್ನು ನಿರ್ಬಂಧಿಸುತ್ತಿದ್ದಾರೆ ಎನ್ನುವ ಆರೋಪವಿದೆ.


**ಎಚ್ಚೆತ್ತುಕೊಳ್ಳದ ಇಲಾಖೆ:** ಸಫಾರಿ ನಿರ್ಬಂಧದಿಂದಾಗುತ್ತಿರುವ ಹತ್ತಾರು ಸಮಸ್ಯೆ ಬಗ್ಗೆ ಸ್ಥಳೀಯ ರೆಸಾರ್ಟ್ ಮಾಲೀಕರು, ಹೋಮ್ ಸ್ಟೇ ಮಾಲೀಕರು ನಿರಂತರವಾಗಿ ಸರಕಾರದ ಗಮನಕ್ಕೆ ತರುವ ಕೆಲಸವನ್ನು ಮಾಡುತ್ತಿದ್ದಾರೆ. ಸಫಾರಿ ನಿರ್ಬಂಧವೂ ಅವೈಜ್ಞಾನಿಕ, ಅರಣ್ಯ ಇಲಾಖೆಯ ಕಿತ್ತಾಟ, ಪ್ರತಿಷ್ಠೆಯ ಕಾರಣಕ್ಕೆ ಈ ತೀರ್ಮಾನವನ್ನು ಸಚಿವರು ತೆಗೆದುಕೊಂಡಿದ್ದಾರೆ ಎನ್ನುವ ನಿರಂತರ ವರದಿಗಳು ಬರುತ್ತಿದ್ದರೂ ಈ ವಿಷಯದಲ್ಲಿ ಅರಣ್ಯ ಇಲಾಖೆ ಜಾಣ ಮೌನ ವಹಿಸಿದೆ.

ಸಫಾರಿ ಪುನರಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಖಡಕ್ ಸೂಚನೆಯ ಹೊರತಾಗಿಯೂ, ಅರಣ್ಯ ಸಚಿವ ಈಶ್ವರ ಖಂಡ್ರೆ, ತಾಂತ್ರಿಕ ಸಮಿತಿಯ ವರದಿಯ ನೆಪದಲ್ಲಿ ನಿರ್ಬಂಧ ಮುಂದುವರಿಸಿದ್ದಾರೆ. ಇನ್ನು ಪ್ರವಾಸೋದ್ಯಮ ಇಲಾಖೆ ಈ ವಿಷಯದಲ್ಲಿ ಇನ್ನೂ ಎಚ್ಚೆತ್ತು ಕೊಳ್ಳದಿರುವುದು ತೀವ್ರ ಆಕ್ಷೇಪಕ್ಕೆ ಕಾರಣವಾಗಿದೆ.

**ಎಲ್ಲೂ ಇಲ್ಲದ ನಿರ್ಬಂಧ ಇಲ್ಲೇಕೆ?**

ದೇಶದಲ್ಲಿ 50ಕ್ಕೂ ಹೆಚ್ಚು ಭಾಗದಲ್ಲಿ ಹುಲಿ ಸಫಾರಿಗಳಿವೆ. ಅದರಲ್ಲಿಯೂ ಕಾರ್ಬೆಟ್, ಸಬರ್‌ಬನ್, ಕನ್ಹಾ, ಪೆಂಚ್ ಅರಣ್ಯ ಪ್ರದೇಶದಲ್ಲಿ ಮಾನವ-ಹುಲಿ ಸಂಘರ್ಷ ಕರ್ನಾಟಕಕ್ಕಿಂತ ಹೆಚ್ಚಾಗಿದೆ. ಆದರೆ ಅಲ್ಲೆಲ್ಲಿಯೂ ಸಫಾರಿಯನ್ನು ನಿರ್ಬಂಧಿಸಿಲ್ಲ. ಸಫಾರಿಗೆ ಹೋದ ಪ್ರವಾಸಿಗರ ಮೇಲೆ ದಾಳಿಗಳಾಗಿಲ್ಲ ಎನ್ನುವ ಕಾರಣಕ್ಕೆ. ಕರ್ನಾಟಕದಲ್ಲಿ ಮಾತ್ರ ಬಂಡೀಪುರ, ನಾಗರಹೊಳೆಗೆ 40 ಕಿಮೀ ದೂರದಲ್ಲಿ ನಡೆದಿರುವ ಹುಲಿ ದಾಳಿಯನ್ನು ಮುಂದಿಟ್ಟು ಸಫಾರಿಯನ್ನು ನಿರ್ಬಂಧಿಸಲಾಗಿದೆ.

**- ರಂಜಿತ್ ಎಚ್. ಅಶ್ವತ್ಥ,** ಬೆಂಗಳೂರು



# ಕ್ರಿಶ್ಚಿಯನ್ ಮಿಶಿನರಿಗಳಿಂದ ಮತಾಂತರಕ್ಕೆ ಹುನ್ನಾರ: ಬಜರಂಗದಳ ಖಂಡನೆ

• ಪ್ರಜೋದಯ ವರದಿ



**ಬೇಲೂರು:** ಮತಾಂತರ ಮಾಡುವ ಉದ್ದೇಶದಿಂದ ಯೇಸುವಿನ ಪುಸ್ತಕಗಳನ್ನು ರಸ್ತೆಯುವುದಕ್ಕೂ ಎಸೆದು ಮತಾಂತರಕ್ಕೆ ಹುನ್ನಾರ ನಡೆಸುತ್ತಿದ್ದಾರೆ ಎಂದು ವಿಶ್ವ ಹಿಂದು ಪರಿಷತ್ ಬಜರಂಗದಳ ತಾಲ್ಲೂಕು ಅಧ್ಯಕ್ಷ ಭರತ್ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನ ಹಾಸನ ರಸ್ತೆಯ ಮಲ್ಲಿಕಾರ್ಜುನಪುರ ಬಳಿ ಮಾತನಾಡಿದ ಅವರು, ಯೇಸುವಿನ ಪುಸ್ತಕಗಳನ್ನ ರಸ್ತೆ ಯುದ್ಧಕ್ಕೂ ಹಾಕಿ ಮತಾಂತರಕ್ಕೆ ಹುನ್ನಾರು ನಡೆಸುತ್ತಿರುವವರನ್ನು ಪೊಲೀಸ್ ಇಲಾಖೆ ಗುರುತಿಸಿ ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಫೆ.15ರಂದು ಮಹಾಶಿವರಾತ್ರಿಯ ಹಿನ್ನೆಲೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಧರ್ಮಸ್ಥಳ ಸೇರಿದಂತೆ ವಿವಿಧ ಶಿವನ ದೇವಾಲಯಕ್ಕೆ ಪಾದಯಾತ್ರೆ ಹೋಗುವುದು ಹಿಂದುಗಳಾದ ನಮ್ಮಲ್ಲಿ ಸರ್ವೇಸಾಮಾನ್ಯವಾಗಿದೆ. ಅದರಲ್ಲೂ ಶಿವರಾತ್ರಿ ಸಮಯದಲ್ಲಿ ಶಿವನ ದರ್ಶನ ಮಾಡಿದರೆ ಪುಣ್ಯ ಲಭಿಸುತ್ತದೆ ಎಂಬುದು ಹಿಂದೂ ಸಂಪ್ರದಾಯಗಳಲ್ಲಿ ಒಂದಾಗಿದೆ. ಇದನ್ನ ತಪ್ಪಿಸಿ ಮತಾಂತರಗೊಳಿಸಬೇಕೆಂಬ ಉದ್ದೇಶದಿಂದ ಈ ರೀತಿ ಮಾಡಲಾಗಿದೆ ಎಂದು ಆರೋಪಿಸಿದರು.

ಗೋ ರಕ್ಷಣಾ ಪ್ರಮುಖ್ ದಕ್ಷಿಣ ಪ್ರಾಂತ್ಯ ಶರತ್ ಅವರು ಮಾತನಾಡಿ, ಕರ್ನಾಟಕದಲ್ಲಿ ಮತಾಂತರ ನಿಷೇಧ ಕಾಯ್ದೆ (ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಅಧಿನಿಯಮ, 2022) ಜಾರಿಯಲ್ಲಿದ್ದರೂ, ಬಲವಂತದ, ಆಮಿಷದ ಅಥವಾ ವಂಚನೆಯ ಮತಾಂತರ ಪ್ರಕರಣಗಳು ಮುಂದುವರಿದಿವೆ ಇದಕ್ಕೆ ಉದಾಹರಣೆಯಾಗಿ ಮಂಗಳವಾರ ಹಾಸನದಿಂದ ಬೇಲೂರು ರಸ್ತೆ ವರೆಗೂ ಎರಡು ಬದಿಯಲ್ಲೂ ಯೇಸುವಿನ ಪುಸ್ತಕಗಳನ್ನ ಹಾಕಿ ಹೋಗಿರುವುದು ಕಾರಣವಾಗಿದೆ ಇಂಥವರನ್ನ ಗುರುತಿಸಿ ಕಠಿಣವಾದಂತಹ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

ಈ ಘಟನೆಯನ್ನು ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘ ಕಟುವಾಗಿ ಖಂಡಿಸಿದ್ದು, ಇಂತಹ ಕೃತ್ಯವನ್ನು ಎಸಗುತ್ತಿರುವ ವ್ಯಕ್ತಿಗಳನ್ನ ಪತ್ತೆ ಹಚ್ಚಿ ಕಾನೂನಿನ ಮೂಲಕ ಶಿಕ್ಷೆ ನೀಡಬೇಕೆಂದು ಮನವಿ ಮಾಡಿದ್ದಾರೆ.

ರಸ್ತೆಯ ಉದ್ಧಕ್ಕೂ ಎಸೆದು ಹೋದಂತ ಯೇಸುವಿನ ಪುಸ್ತಕಗಳನ್ನ ಕಂಡು ವಿಶ್ವ ಹಿಂದೂ ಪರಿಷತ್ ಬಜರಂಗದಳ ಮನವಿ ನೀಡಿದ ಮೇರೆಗೆ ಪೊಲೀಸ್ ಇಲಾಖೆ ಸಿಬ್ಬಂದಿಗಳು ರಸ್ತೆ ಯುದ್ಧಕ್ಕೂ ಬಿದ್ದಿದ್ದ ಪುಸ್ತಕಗಳನ್ನ ಶೇಖರಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ತಾಲೂಕು ಕಾರ್ಯದರ್ಶಿ ನಾಗೇಶ್ (ಗುಂಡ) ತಾಲೂಕು ಸಂಯೋಜಕ ಭರತ್, ತಾಲೂಕು ಸಹ ಸಂಯೋಜಕ ಮೋಹನ್, ಶಂಕರ್, ದರ್ಶನ್ ಹಾಜರಿದ್ದರು.

### ಹೊಸದೊಂದು ಉಪಾಯ

ಹಾಸನ ಮಾರ್ಗವಾಗಿ ಪಾದಯಾತ್ರೆ ಹೊರಟಿರುವ ಭಕ್ತವೃಂದವನ್ನು ಮತಾಂತರಗೊಳಿಸುವ ನಿಟ್ಟಿನಲ್ಲಿ ಅನ್ಯಕೋಮಿನವರು ಹೊಸದೊಂದು ಉಪಾಯ ಹುಡುಕುವ ಭರದಲ್ಲಿ ತಾವು ಪೂಜಿಸುವ ಯೇಸುವಿಗೆ ಅಪಮಾನ ಮಾಡಿದ್ದಾರೆ.

ಇಂತಹ ಒಂದು ಘಟನೆ ಹಾಸನ ಮತ್ತು ಬೇಲೂರು ನಡುವೆ ಕಿಲೋಮೀಟರ್ ಗಟ್ಟಲೆ ಯೇಸುವಿನ ಜೀವನ ತಿಳಿಯುವ ವಿವಿಧ ಪುಸ್ತಕಗಳನ್ನ ಮತ್ತು ಆತನ ಸಂದೇಶ ಸಾರುವ ಕರಪತ್ರಗಳನ್ನ, ದಾರಿ ಉದ್ದಕ್ಕೂ ಎಸೆದು ಕೊಂಡು ಹೋಗುತ್ತಿರುವುದು ಪಾದಯಾತ್ರೆಗಳ ಆಕ್ರೋಶಕ್ಕೆ ಗುರಿಯಾಗಿದೆ.

# ಸೀಫರ್ಟ್-ಅಲೆನ್ ದಾಖಲೆ ಜೊತೆಯಾಟ

## ಯುಎಇ ವಿರುದ್ಧ ನ್ಯೂಜಿಲೆಂಡ್‌ಗೆ 10 ವಿಕೆಟ್ ಜಯ

**ಚೆನ್ನೈ:** ನ್ಯೂಜಿಲೆಂಡ್‌ನ ಆರಂಭ ಆಟಗಾರರಾದ ಟಿಮ್ ಸೀಫರ್ಟ್ (ಔಟಾಗದೇ 89) ಮತ್ತು ಫಿನ್ ಅಲೆನ್ (ಔಟಾಗದೇ 84) ಅವರು ಯುಎಇ ಬೌಲರ್‌ಗಳ ಮೇಲೆ ಸವಾರಿ ನಡೆಸಿದರು. ಇವರಿಬ್ಬರ ನಡುವೆ 175 ರನ್‌ಗಳ ದಾಖಲೆ ಜೊತೆಯಾಟದ ನೆರವಿನಿಂದ ನ್ಯೂಜಿಲೆಂಡ್ ಟಿ-20 ವಿಶ್ವಕಪ್ ಡಿ ಗುಂಪಿನ ಪಂದ್ಯದಲ್ಲಿ ಮಂಗಳವಾರ ಯುಎಇ ತಂಡವನ್ನು 10 ವಿಕೆಟ್‌ಗಳಿಂದ ನಿರಾಯಾಸವಾಗಿ ಮಣಿಸಿತು.

ಯುಎಇ ತಂಡ 6 ವಿಕೆಟ್‌ಗೆ 173 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು. ನಾಯಕ ಹಾಗೂ ಆರಂಭ ಆಟಗಾರ ಮುಹಮ್ಮದ್ ವಾಸೀಂ (ಔಟಾಗದೇ 66, 45 ಎಸೆತ) ಮತ್ತು ಮಧ್ಯಮ ಕ್ರಮಾಂಕದ ಆಟಗಾರ ಅಲಿಶಾನ್ ಶರಾಫು (55, 47 ಎಸೆತ) ಅವರು ಅರ್ಧ ಶತಕಗಳನ್ನು ಬಾರಿಸುವುದರೊಂದಿಗೆ ಅರಬ್ ಎಮಿರೇಟರ ತಂಡ ಟೂರ್ನಿಯ ಇತಿಹಾಸದಲ್ಲೇ ತನ್ನ ಅತ್ಯಧಿಕ ಮೊತ್ತ ದಾಖಲಿಸಿತು.

ಆದರೆ ಈ ಮೊತ್ತ ಮಿಚೆಲ್ ಸ್ಯಾಂಟ್ನರ್ ಪಡೆಗೆ ಸವಾಲೆನಿಸಲಿಲ್ಲ. ಫಿನ್ ಅಲೆನ್ ಮತ್ತು ಸೀಫರ್ಟ್ ಅವರು ಇನ್ನೂ 28 ಎಸೆತಗಳು ಉಳಿದಿರುವಂತೆ (15.2 ಓವರುಗಳಲ್ಲಿ) ಗೆಲುವನ್ನು ಪೂರೈಸಿದರು. ಇದು ಗ್ರೂಪ್ ಆಫ್ ಡೆತ್ ಎನಿಸಿದ ಡಿ ಗುಂಪಿನಲ್ಲಿ ನ್ಯೂಜಿಲೆಂಡ್‌ಗೆ ಎರಡನೇ ಗೆಲುವು.



ಇದಕ್ಕೂ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಯುಇಎ ತಂಡ, ಆರ್ಯಾಂಶ್ ಶರ್ಮಾ ಅವರನ್ನು ಬೇಗನೇ ಕಳೆದುಕೊಂಡಿತು. ಅವರು ಜೇಕಬ್ ಡಫಿ ಬೌಲಿಂಗ್‌ನಲ್ಲಿ (ಎರಡನೇ ಓವರ್) ಶಾರ್ಟ್ ಬಾಲ್‌ಗೆ ನಿರ್ಗಮಿಸಿದರು. ಪುಲ್ ಮಾಡುವ ಯತ್ನದಲ್ಲಿ ಲಾಂಗ್‌ಲೆಗ್‌ನಲ್ಲಿ ಕ್ಯಾಚಿತ್ತರು.

ವಾಸಿಂ ಮತ್ತು ಶರಾಫು ಎರಡನೇ ವಿಕೆಟ್‌ಗೆ 107 ರನ್ ಸೇರಿಸಿದರು. ಇಬ್ಬರಲ್ಲಿ ವಾಸಿಂ ಆಕ್ರಮಣಕಾರಿಯಾಗಿದ್ದು, ಡಫಿ ಮತ್ತು ರಚಿನ್ ರವೀಂದ್ರ, ಬೌಲಿಂಗ್‌ನಲ್ಲಿ ಸಿಕ್ಸರ್‌ಗಳನ್ನು ಎತ್ತಿದರು. ಈ ಜೊತೆಯಾಟ ಎದುರಾಳಿಗಳ ವಿಶೇಷ ಪ್ರಯತ್ನದಿಂದ ಕೊನೆಗೊಂಡಿತು.

# ಮೋದಿಗೆ ಆಕ್ಷೇಪಾರ್ಹ ಹೇಳಿಕೆ: ಕ್ಷಮೆಗೆ ಆಗ್ರಹ

• ಪ್ರಜೋದಯ ವರದಿ



**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ಷಮೆ ಕೇಳಬೇಕೆಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಗ್ರಹಿಸಿದ್ದಾರೆ.

ಪ್ರಧಾನಿ ಅವರನ್ನು ಹೇಡಿ ಎಂಬ ಕೆಟ್ಟ ಪದ ಬಳಸಿದ್ದು ಸರಿಯೇ. ಅದನ್ನು ಖಂಡತುಂಡವಾಗಿ ಖಂಡಿಸುತ್ತೇವೆ. ಈ ಬಗ್ಗೆ ಪಶ್ಚಾತ್ತಾಪ ಆಗಿದ್ದರೆ ಅವರು ತಕ್ಷಣ ದೇಶದ ಕ್ಷಮೆ ಕೇಳಬೇಕು. ಸಿದ್ದರಾಮಯ್ಯ ತಾಳ್ಮೆ ಕಳಕೊಂಡು ಹೀಗೆ ಮಾತನಾಡುತ್ತಿದ್ದಾರಾ. ರಾಹುಲ್‌ಗಾಂಧಿ ಅವರ ಓಲೈಕೆಗಾಗಿ ಹೀಗೆ ಮಾತನಾಡುತ್ತಾರಾ. ಮುಖ್ಯಮಂತ್ರಿ ಪದವಿಯಲ್ಲಿ ಇನ್ನೊಂದಷ್ಟು ದಿನ ಉಳಕೊಳ್ಳಲು ಹೀಗೆ ಮಾತಾಡಿದ್ದಾರಾ. ಅಥವಾ ತಲೆಗಿಲೆ ಕೆಟ್ಟು ಇಂಥ ಪದ ಬಳಸುತ್ತಿದ್ದಾರಾ ಎಂದು ವ್ಯಂಗ್ಯವಾಡಿದರು.

ಅಮೃತವನ್ನು ಸವಿಯಬೇಕಾದ ನಾಲಿಗೆಯಲ್ಲಿ ಹೇಸಿಗೆಯ ಮಾತುಗಳು ಬರುತ್ತಿರುವುದು ವಿಪರ್ಯಾಸ. ನಾಲಿಗೆಗೆ ಒಂದು ಬೆಲೆ ಇದೆ. ಅದಕ್ಕೊಂದು ಗೌರವ ಇದೆ. ನಾಲಿಗೆ ಒಂದು ಜೀವನದ ಉತ್ತಮ ಮಟ್ಟ ಇಲ್ಲವೇ ಕೆಟ್ಟ ಪರಂಪರೆಯ ಸೃಷ್ಟಿಗೆ ಕಾರಣವಾಗುತ್ತದೆಂದು ವಿಶ್ಲೇಷಿಸಿದರು.

ಸಚಿವ ಪ್ರಿಯಾಂಕ್ ಖರ್ಗೆಯವರು ಇದಕ್ಕೂ ಮುಂಚೆ ಇದೇ ರೀತಿಯ ಪದ ಬಳಸಿದ್ದರು. ಸರಿಸಮಾನ ಪದವಿಯಲ್ಲಿ ಇರುವವರು ಕೆಲವು ಸಂದರ್ಭದಲ್ಲಿ ಟೀಕೆ ಮಾಡುವಾಗ ಲಘುವಾಗಿ ಮಾತನಾಡಿದರೂ ಅವರವರ ಎತ್ತರಕ್ಕೆ ಸರಿ ಹೋಗಬಹುದು. ಆದರೆ, ಒಬ್ಬ ಯುವಕ, ಸಣ್ಣ ವ್ಯಕ್ತಿ ದೇಶದ ಪ್ರಧಾನಿಯನ್ನು ಇಷ್ಟೊಂದು ಕಠಿಣ ಪದಗಳಿಂದ ನಿಂದಿಸಿದರೆ ಪ್ರಧಾನಿಯನ್ನು ಗೌರವಿಸುವ ಈ ದೇಶವಾಸಿಗಳು ಅವರನ್ನು ಬಹುಶಃ ಕುನ್ನಿಗೆ ಹೋಲಿಸುತ್ತಾರೆ. ನಾನು ಆ ಥರ ಹೋಲಿಸುವುದಿಲ್ಲ ಎಂದು ನುಡಿದರು.

ಬೆಟ್ಟ ಅಗೆದು ಇಲಿ ಹಿಡಿಯುವ ಕೆಲಸ

ವಿಧಾನ ಮಂಡಲ ಅಧಿವೇಶನದಲ್ಲಿ ವಿಬಿ-ಜಿ ರಾಮ್-ಜಿ ವಿರೋಧಿಸುವ ಕೆಲಸ ಮಾತ್ರ ಮಾಡಿದ್ದಾರೆ. ಜನರ ಸಮಸ್ಯೆ ಚರ್ಚೆ ಆಗಿಲ್ಲ. ಕಾಯ್ದೆ ಮೊದಲೇ ಅನುಮೋದನೆ ಪಡೆದ ಕಾರಣ ಇವರ ಇಷ್ಟು ದಿನದ ಶ್ರಮ ಕಸದ ಬುಟ್ಟಿಗೆ ಹೋಯಿತಲ್ಲವೇ ಎಂದು ಪ್ರಶ್ನಿಸಿದರು.

ನಿಮ್ಮ ಖಜಾನೆ ಖಾಲಿ ಆಗಿದೆ. ಯುವಜನರ ಬಗ್ಗೆ ನಿಮಗೆ ಪ್ರೀತಿ ಪ್ರೇಮ ಇಲ್ಲ. ಅವರ ಭವಿಷ್ಯದ ಕುರಿತು ಕಾಳಜಿ ಇಲ್ಲ. ಅದನ್ನು ತುಂಬುವ ಬದಲು ನೀವು ಸಂತೆ ಭಾಷಣ ಮಾಡುವುದೇಕೆ ಎಂದು ಕೇಳಿದರು.

# ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ

## ನಿಲುವಾಗಿಲು ಗ್ರಾಮದ ಅಭಿವೃದ್ಧಿಗೆ ಕ್ರಮ: ಸಿಮೆಂಟ್ ಮಂಜು | ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಭೂಮಿಪೂಜೆ

• ಪ್ರಜೋದಯ ವರದಿ

**ಆಲೂರು:** ನಿಲುವಾಗಿಲು ಗ್ರಾಮಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲು ಪ್ರಾಮಾಣಿಕವಾಗಿ ಸಹಕರಿಸುತ್ತೇನೆ. ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ದೊರಕುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಪಾಳ್ಯ ಹೋಬಳಿ ನಿಲುವಾಗಿಲು ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ 14 ಲಕ್ಷ ರೂ. ವೆಚ್ಚದಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಲು ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳ ಭವಿಷ್ಯದ ಭದ್ರ ತಳಪಾಯವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ಪುಸ್ತಕ, ಸಮವಸ್ತ್ರ, ಮಧ್ಯಾಹ್ನ ಬಿಸಿ ಊಟ ನೀಡಲಾಗುತ್ತದೆ. ಮಕ್ಕಳು ಪ್ರಾರಂಭಿಕ ಹಂತದಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುವಂತೆ



ಪೋಷಕರು ಸಹಕರಿಸಬೇಕು. ಕೆಲವು ದಶಕಗಳ ಹಿಂದೆ ಗ್ರಾಮದಲ್ಲಿದ್ದ ಶಿಕ್ಷಕರು ಗ್ರಾಮದ ಅಭಿವೃದ್ಧಿಗೆ ಪೂರಕ ಬೆನ್ನೆಲುಬಾಗಿ ನಿಲ್ಲುತ್ತಿದ್ದರು. ಇವರ ಮಾರ್ಗದರ್ಶನ ಪಡೆದ ಹಲವು ವಿದ್ಯಾರ್ಥಿಗಳು ಇಂದು ಉನ್ನತ ಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು.

ಗ್ರಾಮಸ್ಥರ ಕೋರಿಕೆಯಂತೆ ಶಾಲೆಗೆ ಅಗತ್ಯವಿರುವ ಆಟದ ಮೈದಾನ, ಏಳು ವರ್ಷಗಳಿಂದ ಅನಾಥವಾಗಿ ಗಿಡ -ಗಂಟೆಗಳು ಬೆಳೆದಿರುವ ಅಂಗನವಾಡಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಸಜ್ಜಿತ ಗೊಳಿಸಲು ಕ್ರಮ ಕೈಗೊಳ್ಳುತ್ತೇನೆ. ನಿಲುವಾಗಿಲು-ಕೃಷ್ಣಾಪುರ ಗ್ರಾಮದ ಮೂಲಕ ಬೇಲೂರು ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ 2 ಕಿ.ಮೀ. ರಸ್ತೆ ನಿರ್ಮಾಣ ಮಾಡಲಾಗುವುದು. ಈ ರಸ್ತೆ ನಿರ್ಮಾಣವಾದರೆ ಕೇವಲ 3 ಕೀ. ಮೀ. ಅಂತರದಲ್ಲಿ ಬೇಲೂರು ತಾಲ್ಲೂಕನ್ನು ಸಂಪರ್ಕಿಸಬಹುದು. ಈ ಬಗ್ಗೆ ಬೇಲೂರು ಶಾಸಕ ಹುಲ್ಲಹಳ್ಳಿ ಸುರೇಶ್ ಅವರೊಂದಿಗೆ ಚರ್ಚಿಸಿದ್ದೇನೆ ಎಂದು ಮಾಹಿತಿ ನೀಡಿದರು.

ಅಂಗನವಾಡಿ, ಶೌಚಾಲಯ ದುರಸ್ತಿ ಕಾಮಗಾರಿಯನ್ನು ಕೂಡಲೆ ಕೈಗೆತ್ತಿಕೊಳ್ಳಲಾಗುವುದು. ಗ್ರಾಮದಲ್ಲಿ ಜೆಜೆಎಂ ಯೋಜನೆಯಲ್ಲಿ ನೀರು ಸರಬರಾಜು ವ್ಯತ್ಯಯವನ್ನು ಸರಿಪಡಿಸಲಾಗುವುದು. ಶಾಲೆ ಹಿಂಭಾಗ ಬಿದ್ದಿರುವ ಕಾಂಪೌಂಡ್ ನಿರ್ಮಾಣ ಮಾಡಲು ಪಂಚಾಯಿತಿ ಅಧಿಕಾರಿಗಳಿಗೆ ಸೂಚಿಸಿದರು. 2.5 ಲಕ್ಷ ರೂ. ವೆಚ್ಚದಲ್ಲಿ ಶಾಲೆ ಮೇಲ್ಚಾವಣಿ ಸರಿಪಡಿಸಲಾಗುವುದು. ಗ್ರಾಮದಲ್ಲಿರುವ ವಿದ್ಯುತ್ ಟ್ರಾನ್ಸ್ ಫಾರ್ಮರ್ ಬದಸಲಿಸಲು ಸೂಚಿಸಿದ್ದೇನೆ ಎಂದರಲ್ಲದೆ, ಅರ್ಧಕ್ಕೆ ನಿಂತಿರುವ ದೇವಸ್ಥಾನಗಳ ಕಾಮಗಾರಿಗೆ ಮುನಶ್ಚೇತನ ನೀಡಲಾಗುವುದು ಎಂದರು.

ಶಾಲೆಗೆ ಹೆಚ್ಚುವರಿ ಶಿಕ್ಷಕರ ನೇಮಕ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ದೂರವಾಣಿ ಮೂಲಕ ಸೂಚನೆ ನೀಡಿದರು.

ಎಸ್.ಡಿ.ಎಂ.ಸಿ. ಅಧ್ಯಕ್ಷೆ ರೋಸ, ಮುಖ್ಯ ಶಿಕ್ಷಕ ಮಹಮದ್‌ಶಫಿ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ದ್ಯಾವಮ್ಮಗೆ ವಾತ್ಸಲ್ಯ ಮನೆ ಹಸ್ತಾಂತರ

• ಪ್ರಜೋದಯ ವರದಿ

**ಹಾಸನ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಶಾಂತಿಗ್ರಾಮ ತಾಲ್ಲೂಕಿನ ಕಮ್ಮರಿಗೆ ಗ್ರಾಮದ ವಾತ್ಸಲ್ಯ ಫಲಾನುಭವಿ ದ್ಯಾವಮ್ಮ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಫಲಾನುಭವಿ ದ್ಯಾವಮ್ಮ ಅವರಿಗೆ ಹಾಸನ ಜಿಲ್ಲೆಯ ಜಿಲ್ಲಾ ನಿರ್ದೇಶಕ ಸುರೇಶ್ ಮೊಯ್ಲಿ ಹಾಗೂ ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರೂ ಹಾಗೂ ಹಾಸನದ ಫ್ರೈಡ್ ಪಿ.ಯು. ಕಾಲೇಜಿನ ವಿಜ್ಞಾನ ವಿಭಾಗದ ಆಡಳಿತ ಅಧಿಕಾರಿಗಳಾದ ಸುರೇಶ್ ಗುರೂಜಿ ಮನೆ ಹಸ್ತಾಂತರ ಮಾಡಿ, ಫಲಾನುಭವಿಗೆ ಮಂಜುನಾಥಸ್ವಾಮಿ ಹಾಗೂ ಪೂಜ್ಯ ಡಾ. ಡಿ.ವೀರೇಂದ್ರ ಹೆಗ್ಗಡೆ ಹಾಗೂ ಹೇಮಾವತಿ ಅಮ್ಮನವರ ಆಶೀರ್ವಾದ ಇರಲಿ ಹಾಗೂ ಇನ್ನು ಮುಂದೆ ಅಜ್ಜಿ ನೆಮ್ಮದಿಯ ಜೀವನ ಸಾಗಿಸಲಿ ಎಂದು ಶುಭ ಹಾರೈಸಿದರು.

ನಂತರ ಮಂಜುನಾಥ ಸ್ವಾಮಿ ಪೂಜೆ ಮಾಡಿ ಹಾಲು ಉಕ್ಕಿಸುವ



ಶಾಸ್ತ್ರ ನೆರವೇರಿಸಲಾಯಿತು.

ಗ್ರಾಮ ಪಂಚಾಯತಿ ಪಿಡಿಓ ಶೈಲಾ, ಗ್ರಾಮ ಪಂಚಾಯತಿ ಅಧ್ಯಕ್ಷೆ ಮಣಿ, ತಾಲ್ಲೂಕು ಯೋಜನಾಧಿಕಾರಿ ಹೇಮ ಲತಾ, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ರಮೇಶ್ ಆರ್.ಎಸ್., ಹರೀಶ್, ಸತ್ಯನಾರಾಯಣ, ಜ್ಞಾನ ವಿಕಾಸಮನ್ವಯ ಅಧಿಕಾರಿ ಹಂಸ ಲೇಖ, ಮೇಲ್ವಿಚಾರಕ ಶ್ರೀಧರ್, ಸೇವಾ ಪ್ರತಿನಿಧಿ ಗೌರಮ್ಮ, ಊರಿನ ಗ್ರಾಮಸ್ಥರು ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು

## ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಹೊಳೆನರಸೀಪುರ:** 66/11 ಕೆ.ವಿ.ವಿ.ವಿ ಕೇಂದ್ರ. ಮಳಲಿ ಇಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ನಿರ್ವಹಿಸಬೇಕಾಗಿರುವುದರಿಂದ ಮಳಲಿ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಮಳಲಿ, ದುಮ್ಮಗೆರೆ, ತೆರಣ್ಯ, ಮಾವನೂರು, ಲಕ್ಷ್ಮೀಪುರ, ಜಾಗರಹಳ್ಳಿ, ದೇವಿಹಳ್ಳಿ, ಸಂತೆಕೊಪ್ಪಲು, ನಾಗನಹಳ್ಳ:ಇ, ಮರ್ಕುಲಿ, ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಫೆ.11 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಶ್ರೀ ಚಂದ್ರಮೌಳೀಶ್ವರ ದೇವಾಲಯದಲ್ಲಿ ವಿವಿಧ ಪೂಜೆ

• ಪ್ರಜೋದಯ ವರದಿ

**ಹಾರನಹಳ್ಳಿ:** ಪುರಾಣ ಪ್ರಸಿದ್ಧ ಶ್ರೀ ಚಂದ್ರಮೌಳೀಶ್ವರ ದೇವಾಲಯದಲ್ಲಿ ಫೆ.15 ರಂದು ಭಾನುವಾರ ಮಹಾಶಿವರಾತ್ರಿ ಪ್ರಯುಕ್ತ ಸಂಜೆ ಪ್ರಥಮ ಯಾಮ ಪೂಜೆ ನಡೆಯಲಿದ್ದು, ಸಂಜೆ 4 ಗಂಟೆಗೆ ಶ್ರೀ ಚಂದ್ರಮೌಳೀಶ್ವರ ಸ್ವಾಮಿ ಸನ್ನಿಧಿಯಲ್ಲಿ ಸಂಕಲ್ಪ ಗಣಪತಿ ಸನ್ನಿಧಿಯಲ್ಲಿ ಪೂಜೆ, ಪುಣ್ಯಾಹ ಮಹಾನ್ಯಾಸ, ಲಘುನ್ಯಾಸ, ಪಾರಾಯಣ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಶತಬಿಲ್ವಾರ್ಚನೆ, ಪಾರ್ವತಿ ಸನ್ನಿಧಿಯಲ್ಲಿ ಲಲಿತಾ ಸಹಸ್ರನಾಮ, ಅಷ್ಟಾವಧಾನ ಸೇವೆ, ಸಂಜೆ 7.30 ಕ್ಕೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಇರುತ್ತದೆ.

ಎರಡನೆಯಾಮದ ಪೂಜೆ ರಾತ್ರಿ 9ರಿಂದ12 ರುದ್ರಾಭಿಷೇಕ ಪೂಜೆ, ಮೂರನೇಯಾಮದ ಪೂಜೆಯನ್ನು



ಮಧ್ಯಾಹ್ನ 12 ರಿಂದ 3 ರ ವರೆಗೆ ರುದ್ರಾಭೀಷೇಕ ಪೂಜೆಯನ್ನು ಏರ್ಪಡಿಸಲಾಗಿದೆ.

ಸೋಮವಾರ ಬೆಳಗಿನ ಜಾವ 3 ಗಂಟೆಯಿಂದ ಸಂಜೆ 6ರವರಗೆ ರುದ್ರಾಭೀಷೇಕ ಪೂಜೆ, ನಾಲ್ಕನೇ ಯಾಮ ಸಮಾಪ್ತಿ ಮಂಗಳಾರತಿ ತೀರ್ಥಪ್ರಸಾದ ಸೇವೆ ಇರುತ್ತದೆ ಎಂದು ಚಂದ್ರಮೌಳೀಶ್ವರ ದೇವಾಲಯದ ಸಮಿತಿ ಆಡಳಿತಾಧಿಕಾರಿ ಹೆಚ್.ಆರ್.ಶಂಕರ್, ಕಾರ್ಯದರ್ಶಿ ಹಾರನಹಳ್ಳಿ ನಾಗೇಂದ್ರ ತಿಳಿಸಿದ್ದಾರೆ.

# ಯುವಜನರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡರೆ ಆರ್ಥಿಕ ಉನ್ನತಿ

## ಭೂಮಿ ಕೈಬಿಟ್ಟರೂ ಗೋಮಾತೆ ಕೈ ಬಿಡುವುದಿಲ್ಲ: ಶಿವಾಚಾರ್ಯ ಸ್ವಾಮೀಜಿ

• ಪ್ರಜೋದಯ ವರದಿ

**ಆಲೂರು:** ಮನುಷ್ಯನನ್ನು ಭೂಮಿ ಕೈಬಿಟ್ಟರೂ ಗೋಮಾತೆ ಮಾತ್ರ ಕೈ ಬಿಡುವುದಿಲ್ಲ ಎಂದು ಕಾರ್ಜುವಳ್ಳಿ ಮಠಾಧೀಶರಾದ ಶಿವಾಚಾರ್ಯ ಸ್ವಾಮಿಜಿ ಅವರು ತಿಳಿಸಿದರು.

ಪಾಳ್ಯ ಹೋಬಳಿ ಯಲಗನಹಳ್ಳಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಇಟ್ಟರೆ ಸಗಣಿಯಾದೆ, ತಟ್ಟಿದರೆ ಕರುಳಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ, ತಟ್ಟದೆ ಹಾಕಿದರೆ ಮೇಲು ಗೊಬ್ಬರವಾದೆ, ನೀನಾರಿಗದೆಯೊ ಎಲೆ ಮಾನವ, ಹರಿ ಹರಿ ಗೋವು ನಾನು ಎಂಬ ಕವಿ ವಾಣಿಯಂತೆ ಗೋವಿನಿಂದ ಪ್ರತಿಯೊಂದು ಫಲವನ್ನು ಮಾನವ ಕಂಡುಕೊಂಡಿದ್ದಾನೆ ಎಂದರು.

ಇತ್ತೀಚೆಗೆ ದೇಶದಲ್ಲಿ ಕ್ಷೀರಕ್ರಾಂತಿಯಾದ ನಂತರ ಹಾಲು ಒಕ್ಕೂಟಗಳು ವಿಶೇಷವಾಗಿ ಬೆಳೆದು ನಿಂತಿವೆ. ರಾಜ್ಯದಲ್ಲಿ ಹಾಲು ಉತ್ಪಾದನೆಯಲ್ಲಿ ಬೆಂಗಳೂರು ಪ್ರಥಮ ಸ್ಥಾನದಲ್ಲಿದ್ದರೆ, ಹಾಸನ ಹಾಲು ಒಕ್ಕೂಟ ಎರಡನೆ ಸ್ಥಾನದಲ್ಲಿರುವುದು ವಿಶೇಷ. ಇತ್ತೀಚೆಗೆ ಕೃತಕ ಹಾಲು ಉತ್ಪಾದನೆಯಲ್ಲಿ ರಸಾಯನಿಕ ಬೆರೆಸಿ ಮಾರಾಟ ಮಾಡುತ್ತಿರುವುದು ಆಘಾತಕಾರಿ ಬೆಳವಣಿಗೆ ಎಂದು ಸ್ವಾಮೀಜಿಗಳು ವಿಷಾದಿಸಿದರು.

ತಿರುಪತಿ ದೇವಸ್ಥಾನದಲ್ಲಿ ಲಡ್ಡು ತಯಾರು ಮಾಡಲು ರಾಜ್ಯದಿಂದ ಶುದ್ಧ ನಂದಿನಿ ಹಾಲು ಪಡೆಯು



ತ್ತಿದ್ದರು. ದೇವಸ್ಥಾನ ಆಡಳಿತ ಮಂಡಲಿ ಅಧಿಕ ಆರ್ಥಿಕ ಲಾಭದ ದೃಷ್ಟಿಯಿಂದ ಬೇರೆಡೆಯಿಂದ ಹಾಲು ಪಡೆದು ಲಡ್ಡು ತಯಾರು ಮಾಡುತ್ತಿದ್ದರು. ಪರಿಶೀಲಿಸಿದಾಗ ಹಂದಿ ಕೊಬ್ಬು ಬಳಸುತ್ತಿರುವುದು ಕಂಡು ಬಂದಿರುವುದು ಆಘಾತಕಾರಿ ವಿಷಯ. ಶ್ರೀಮಂತ ದೇವಾಲಯದಲ್ಲಿ ಅನಾಚಾರ ನಡೆದು ಬೆಳಕಿಗೆ ಬಂತು. ನಂತರದಲ್ಲಿ ಕರ್ನಾಟಕ ಹಾಲು ಒಕ್ಕೂಟದಿಂದ ತಯಾರಾಗುವ ನಂದಿನಿ ತುಪ್ಪ ಪಡೆಯಲು ಬಂದಿರುವುದು ಬಹಳ ವಿಶೇಷ. ಗೋವು ಕಸವನ್ನು ತಿಂದರೂ ಹಾಲು ನೀಡುತ್ತದೆ. ಹಾಲಿನಲ್ಲಿ 20 ದಿನದ ವರೆಗೆ ವಿಷ ಬರುವುದಿಲ್ಲ. ಯುವಜನರು ಹೈನುಗಾರಿಕೆಯಲ್ಲಿ ತೊಡಗಬೇಕು. ಆಡಳಿತ ಮಂಡಲಿ ಗ್ರಾಹಕರನ್ನು ಪ್ರೋತ್ಸಾಹಿಸಬೇಕು ಎಂದರು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕ ಕೆ. ಎಸ್. ಮಂಜೇಗೌಡರು ಮಾತನಾಡಿ, ಗೋವುಗಳನ್ನು ಸಾಕಿ ಅದರ ಉಪಯೋಗ ಪಡೆದುಕೊಂಡ ವರಿಗೆ ಮಾತ್ರ ಪಡೆದ ಫಲ ಅರ್ಥವಾಗುತ್ತದೆ. ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರು ರಾಜ್ಯದಲ್ಲಿ ಹಾಲು ಉತ್ಪಾದನೆ ಮತ್ತು ಮಾರಾಟ ಮಾಡಲು ಸಹಕಾರ ಮಂಡಲಿಗಳನ್ನು ರಚಿಸಿ, ಹೈನುಗಾರಿಕೆ ಅಭಿವೃದ್ಧಿಗೆ ಕಾರಣವಾಗಿದ್ದಾರೆ. ಹೈನುಗಾರಿಕೆ ಕುಟುಂಬದ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಸಹಕಾರಿಯಾಗಿದೆ ಎಂದರು.

ಸಮಾರಂಭದಲ್ಲಿ ಕೆ.ಎಂ.ಎಫ್. ನಿರ್ದೇಶಕ ಪಿ. ಲಿಂಗರಾಜು, ಆಡಳಿತ ಅಧಿಕಾರಿ ಸೌಜನ್ಯ, ಸಂಘದ ಅಧ್ಯಕ್ಷ ಹಾಲಪ್ಪ, ಕಾರ್ಯದರ್ಶಿ ಯೋಗೇಶ್ ಉಪಸ್ಥಿತರಿದ್ದರು.

# ಗಂಗಾಮತ ಸಮಾಜ ಸನಾತನ ಸಂಸ್ಕೃತಿಯ ಭಾಗ

• ಪ್ರಜೋದಯ ವರದಿ

**ಅರಸೀಕೆರೆ:** ಗಂಗಾಮತ ಸಮಾಜವು ಸನಾತನ ಸಂಸ್ಕೃತಿಯ ಭಾಗವಾಗಿದೆ. ಯುಗ ಯುಗಾಂತರಗಳ ನಂಟು ಹೊಂದಿರುವ ಸಮಾಜದಲ್ಲಿ ಭೀಷ್ಮ, ಅಂಬಿಗರ ಚೌಡಯ್ಯನಂತಹ ಮಹನೀಯರು ಜನಿಸಿ ಗಂಗಾಮತ ಸಮಾಜವನ್ನು ಉದ್ದರಿಸಿದ್ದಾರೆ ಎಂದು ರಾಜ್ಯ ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷ ಹಾಗೂ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಸ್ಮರಿಸಿದರು.

ನಗರದ ಗಂಗಾಪರಮೇಶ್ವರಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯಲ್ಲಿ ಮಾತನಾಡಿದ ಅವರು, ತಾಲ್ಲೂಕು ಆಡಳಿತದ ವತಿಯಿಂದ ಆಯೋಜಿಸುವ ಮಹನೀಯರ ಜಯಂತಿ ಆಚರಣೆಗೆ ವೈಯಕ್ತಿಕವಾಗಿ



ನಾನು ಎರಡು ಲಕ್ಷ ರೂ.ಗಳನ್ನು ನೀಡುವುದಾಗಿ ಘೋಷಿಸಿದರು.

ಈ ಹಿಂದೆ ನಾನೇ ನಿರ್ಮಿಸಿ ಕೊಟ್ಟಿರುವ ಗಂಗಾಪರಮೇಶ್ವರಿ ಸಮುದಾಯ ಭವನದ ನವೀಕರಣದ ಕಾಮಗಾರಿಗೆ ಮತ್ತೆ 25 ಲಕ್ಷ ರೂ.ಗಳ ಅನುದಾನ ನೀಡುವ ಜೊತೆಗೆ ಗಂಗಾಪರಮೇಶ್ವರಿ ಸಹಕಾರಿ ಸಂಘಕ್ಕೆ 5 ಲಕ್ಷ ರೂ. ಪ್ರೋತ್ಸಾಹ ಧನವನ್ನು ಸಹ ನೀಡುವುದಾಗಿ ಘೋಷಿಸಿದರು.

ನಗರಸಭೆ ಮಾಜಿ ಅಧ್ಯಕ್ಷ ಎಂ. ಸಮೀವುಲ್ಲಾ ಮಾತನಾಡಿ, ಜಾತಿ-ಮತವಿಲ್ಲದೆ ಎಲ್ಲರೂ ಒಡಗೂಡಿ ಅದರಲ್ಲೂ ವಿಶೇಷವಾಗಿ ಸಣ್ಣಪುಟ್ಟ ಸಮಾಜಗಳನ್ನ ಗುರುತಿಸಿ ಆ ಸಮಾಜಗಳ ಮುಖಂಡರು ರಾಜಕೀಯವಾಗಿ ಬೆಳೆಸುವ ಜೊತೆಗೆ ಸಮಾಜದ ಸಂಘಟನೆಗೆ ಅನುವಾಗುವ ರೀತಿಯಲ್ಲಿ ಸುಸಜ್ಜಿತ ಸಮುದಾಯ ಭವನಗಳನ್ನು ನಿರ್ಮಿಸಬೇಕು ಎಂದರು.

ತಾಲ್ಲೂಕು ಗಂಗಾಮತ ಸಮಾಜದ ಅಧ್ಯಕ್ಷ ಡಿ.ಲಕ್ಷ್ಮಣ್ ಮಾತನಾಡಿ, ತಾಲ್ಲೂಕಿನಲ್ಲಿ ಸಣ್ಣ ಸಮಾಜವಾಗಿರುವ ನಮ್ಮ ಸಮಾಜವನ್ನು ಅಪ್ಪಿಕೊಂಡು ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ ಸಮಾಜದ ಸಂಘಟನೆಗೆ ಸಹಕರಿಸುತ ಬಂದಿರುವ ಶಾಸಕರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು.

ತಹಸೀಲ್ದಾರ್ ಸಂತೋಷ್‌ಕುಮಾರ್, ನಗರಸಭೆಯ ಪೌರಾಯುಕ್ತ ಕೃಷ್ಣಮೂರ್ತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಸಮಿತಿ ಅಧ್ಯಕ್ಷ ಧರ್ಮಶೇಖರ್, ಗಂಗಾಮತ ಸಮಾಜದ ಉಪಾಧ್ಯಕ್ಷ ರವಿಶಂಕರ್, ಸತೀಶ್, ಪ್ರಭಾಕರ್, ಜಾಜೂರು ಸಿದ್ದೇಶ್ ಹಾಜರಿದ್ದರು.

# ಪಾರ್ಶ್ವನಾಥ ತೀರ್ಥಂಕರ ಮೂರ್ತಿಗೆ ಮಸ್ತಕಾಭಿಷೇಕ

• ಪ್ರಜೋದಯ ವರದಿ

**ಹಳೇಬೀಡು:** ಜೈನರಗುತ್ತಿ ಕ್ಷೇತ್ರದಲ್ಲಿ ವಾರ್ಷಿಕ ಪೂಜೆ ಹಾಗೂ ತೀರ್ಥೋದ್ದಾರಕ ವೀರಸಾಗರ ಮುನಿ ಮಹಾರಾಜರ 16 ನೇ ವರ್ಷದ ದೀಕ್ಷಾ ದಿನದ ಅಂಗವಾಗಿ 24 ತೀರ್ಥಂಕರರು ಹಾಗೂ ಗರ್ಭಗುಡಿಯ ಪಾರ್ಶ್ವನಾಥ ತೀರ್ಥಂಕರ ಮೂರ್ತಿಗೆ ಶ್ರದ್ಧಾಭಕ್ತಿಯಿಂದ ಮಸ್ತಕಾಭಿಷೇಕ ನೆರವೇರಿತು.

ಜೈನರಗುತ್ತಿಯ ಜಿನ ಮಂದಿರದಲ್ಲಿ ಗಂಟೆ ಹಾಗೂ ಜಾಗೆಯ ವಾದ್ಯದೊಂದಿಗೆ ಮುಂಜಾನೆಯಿಂದಲೇ ಮಂತ್ರಘೋಷ ಮೊಳಗಿತ್ತು. ವಿವಿಧ ಪೂಜಾ ವಿಧಾನ ನಡೆಸಿದ ನಂತರ 24 ತೀರ್ಥಂಕರರ ಮೂರ್ತಿಗಳು ಹಾಗೂ ಗರ್ಭಗುಡಿಯ ಪಾರ್ಶ್ವನಾಥ ತೀರ್ಥಂಕರ ಮೂರ್ತಿಗೆ



ವಿವಿಧ ದ್ರವ್ಯಗಳಿಂದ ಮಸ್ತಕಾಭಿಷೇಕ ನಡೆಯಿತು. ಜಲ, ಶ್ರೀಗಂಧ, ಕ್ಷೀರ (ಹಾಲು), ಸರ್ವೌಷಧ (ಕಷಾಯ), ಅಶ್ವಗಂಧ, ಎಳನೀರು ಹಾಗೂ ಪುಷ್ಪಗಳಿಂದ ಮಸ್ತಕಾಭಿಷೇಕ ನಡೆಯಿತು.

ನೆರೆದಿದ್ದ ಭಕ್ತರು ಕಣ್ಮನ ಸೆಳೆಯುವ ಮಸ್ತಕಾಭಿಷೇಕವನ್ನು ಕಣ್ತುಂಬಿಕೊಂಡರು. ಮಹಿಳೆಯರು ಜಿನ ಗಾಯನ ಹಾಡುತ್ತಾ, ಭಕ್ತಿ ಭಾವದಿಂದ ಮಸ್ತಕಾಭಿಷೇಕ ವೀಕ್ಷಿಸಿದರು.

ಇದೆ ಸಂದರ್ಭದಲ್ಲಿ ಜೈನರಗುತ್ತಿ ಟ್ರಸ್ಟ್ ಕಾರ್ಯದರ್ಶಿ ಹೊಸದುರ್ಗ ಬ್ರಹ್ಮಪಾಲ ಜೈನ್ ಮಾತನಾಡಿ, ತೀರ್ಥೋದ್ದಾರಕ ವೀರಸಾಗರ ಮುನಿ ಮಹಾರಾಜರು ಜೈನ ಸಮಾಜವನ್ನು ಒಗ್ಗೂಡಿಸಿ ಜೈನರಗುತ್ತಿ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದರಿಂದ ಕ್ಷೇತ್ರ ಅಭಿವೃದ್ಧಿ ಕಂಡಿದೆ. ಕರ್ನಾಟಕದವರು ಮಾತ್ರವಲ್ಲದೆ ಉತ್ತರ ಭಾರತದ ಭಕ್ತರು ಜೈನರ ಗುತ್ತಿಯತ್ತ ಪಾದ ಬೆಳೆಸಿದ್ದಾರೆ. ಇತಿಹಾಸದ ಹಿನ್ನೆಲೆ ಅರಿತ ವೀರಸಾಗರ ಮಹಾರಾಜರು, ಜೈನ ಸಮಾಜ ಬಾಂಧವರಲ್ಲಿ ಕ್ಷೇತ್ರದ ಮಹತ್ವ ಕುರಿತು ಅರಿವು ಮೂಡಿಸಿದ್ದಾರೆ ಎಂದರು.

ಪ್ರಧಾನ ಅರ್ಚಕ ಶೀತಲ ಪಂಡಿತ್ ಪೂಜಾ ವಿಧಾನ ನೆರವೇರಿಸಿದರು.

ಜೈನರಗುತ್ತಿ ಪದಾಧಿಕಾರಿಗಳಾದ ಹೊಂಗೇರಿ ದೇವೇಂದ್ರ, ಧವನ್ ಜೈನ್, ಶಶಿಕುಮಾರ್ ಶ್ರಾವಕರಾದ ನಾಗಚಂದ್ರ, ಜಿನಚಂದ್ರ, ಹಾಸನದ ರತ್ನರಾಜು, ಆದಿರಾಜ್, ಬ್ರಹ್ಮರಾಜು, ಕೀರ್ತಿ ಕುಮಾರ್, ರೇಖಾ ಧವನ್, ಸ್ವಾತಿ ಪ್ರಶಾಂತ್, ರೂಪಾ ಅನಂತರಾಜು, ಇಚ್ಛಾ ಜೈನ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

# ಫೆ.14 ಎಸ್ಸಿ, ಎಸ್ಟಿ ನೌಕರರ ಸಮ್ಮಿಲನ ಸಮಾವೇಶ

• ಪ್ರಜೋದಯ ವರದಿ

**ಹೊಳೆನರಸೀಪುರ:** ಉನ್ನತ ಹುದ್ದೆ ಅಲಂಕರಿಸಿರುವ ತಾಲ್ಲೂಕಿನ ಪರಿಶಿಷ್ಟ ಸಮುದಾಯದ ಸರ್ಕಾರಿ ನೌಕರರನ್ನು ಒಂದೆಡೆ ಸೇರಿಸಿ ಸಮ್ಮಿಲನ ಸಮಾವೇಶ ನಡೆಸುತ್ತಿರುವುದಾಗಿ ಎಸ್ಸಿ, ಎಸ್ಟಿ ನೌಕರರ ಸಂಘದ ಸಂಚಾಲಕ ಎಸ್. ಉಮೇಶ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟರ ಸಬಲೀಕರಣದ ಉದ್ದೇಶದಿಂದ ಸರ್ಕಾರ ಹತ್ತಾರು ಕಾರ್ಯಕ್ರಮ ನೀಡಿದೆ. ನಮ್ಮ ತಾಲ್ಲೂಕಿನ ಸಮುದಾಯದವರು ಹಲವು ರಾಜ್ಯ ಹಾಗೂ ಜಿಲ್ಲೆಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಆದರೆ ಅವರನ್ನು ಸಮಾವೇಶ ನಡೆಸುವ ಮೂಲಕ ಸೌಹಾರ್ದಯುತ ಭೇಟಿ ಸಮ್ಮಿಲನ ನಡೆಸಲಾಗುವುದು. ಇದರಿಂದ ಸಮುದಾಯದ ಏಳಿಗೆ ಮತ್ತು ಪರಸ್ಪರ ಸಹಕಾರ ದೊರಕಿ



ದಂತಾಗುತ್ತದೆ ಎಂದು ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಫೆ.14 ರ ಶನಿವಾರದಂದು ಸಮಾವೇಶ ಆಯೋಜಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆ ರಾಜ್ಯ ಸಚಿವ ಎಚ್.ಸಿ.ಮಹದೇವಪ್ಪ, ಪಿಡಬ್ಲ್ಯುಡಿ ಸಚಿವ ಸತೀಶ್‌ಜಾರಕಿಹೊಳಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕಾ ಖರ್ಗೆ ಆಗಮಿಸಲಿದ್ದಾರೆ. ಸಮಾವೇಶದ ಅಧ್ಯಕ್ಷತೆಯನ್ನು ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕ ಡಾ.ಜಿ.ಪಿ.ದೇವರಾಜ್ ವಹಿಸಲಿದ್ದಾರೆ. ಆಹ್ವಾನಿತರಾಗಿ ಜಿಲ್ಲೆಯ ನಾನಾ ಶಾಸಕರು, ಸಂಸದ ಹಾಗೂ ಮೈಸೂರು ಕ್ಷೇತ್ರದ ವಿಧಾನ ಪರಿಷತ್ತಿನ ಸದಸ್ಯ ಡಾ. ಕೆ.ಶಿವಕುಮಾರ್ ಭಾಗಿಯಾಗಲಿದ್ದಾರೆ. ಜಿಲ್ಲಾ ವರಿಷ್ಠಾಧಿಕಾರಿಗಳು ಮತ್ತು ತಾಲ್ಲೂಕಿನ ಅಧಿಕಾರಿಗಳು ಉಪಸ್ಥಿತರಿದ್ದು, ಸಮೂದಾಯದ ಸಹಕಾರ ಅತ್ಯಂತ ಮುಖ್ಯವಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸವಂತೆ ಕೋರಿದರು.

ಎಸ್ಸಿ, ಎಸ್ಟಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಬಿ.ಕೆ.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಯತೀಶ್, ಖಜಾಂಚಿ ಬಿ.ಎನ್.ಯೋಗಮೂರ್ತಿ ಅವರು ಹಾಜರಿದ್ದರು.

# ರೈತರ ಸಹಕಾರದಿಂದ ಉತ್ತಮ ರಸ್ತೆ ನಿರ್ಮಾಣ: ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜಾಗ ಬಿಟ್ಟುಕೊಡುವುದರ ಜೊತೆಗೆ ಸ್ಥಳೀಯರು, ಗ್ರಾಮಸ್ಥರು ಸಹಕಾರ ನೀಡಿದ್ದಲ್ಲಿ ಗುಣಮಟ್ಟದ ರಸ್ತೆ ನಿರ್ಮಾಣವಾಗಲು ಸಾಧ್ಯವೆಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಕಸಬಾ ಹೋಬಳಿ ಅಡಗೂರು ಗ್ರಾಮಕ್ಕೆ ಡಿ.ಕಾಳೇನಹಳ್ಳಿ ಗ್ರಾಮದ ಮಂಚಿಕಟ್ಟೆ ಯಿಂದ ಸಂಪರ್ಕ ಕಲ್ಪಿಸುವ 800 ಮೀಟರ್ ಉದ್ದದ ರಸ್ತೆಗೆ ಅಡಗೂರು ಗ್ರಾಮದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಪಟ್ಟಣದಿಂದ 3 ಕೀ.ಮಿ ದೂರದಲ್ಲಿರುವ ಅಡಗೂರು ಗ್ರಾಮಕ್ಕೆ ಡಿ.ಕಾಳೇನಹಳ್ಳಿಯ ಮಂಚಿಕಟ್ಟೆವರೆಗೂ ಈಗಾಗಲೇ ರಸ್ತೆ ನಿರ್ಮಾಣವಾಗಿದ್ದು, ಮಂಚಿಕಟ್ಟೆಯಿಂದ ಯಾಚೇನಹಳ್ಳಿ, ಅಡಗೂರು



ತಿರುವಿನವರೆಗೂ ರಸ್ತೆ ನಿರ್ಮಾಣವಾಗದೇ ಉಳಿದಿರುವ ರಸ್ತೆಯನ್ನು ಅಂದಾಜು 1 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗುವುದು. ರಸ್ತೆ ನಿರ್ಮಾಣದ ವೇಳೆ ಗ್ರಾಮಸ್ಥರು, ರೈತರು ಸಹಕಾರ ನೀಡಿ ಗುಣಮಟ್ಟದ ರಸ್ತೆ ನಿರ್ಮಿಸಿಕೊಳ್ಳುವಂತೆ ಸೂಚನೆ ನೀಡಿದರು.

ರಾಜಕೀಯ ಆರಂಭದ ದಿನಗಳಲ್ಲಿ ತಾವು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ನನ್ನ ಗೆಲುವಿಗೆ ಕಾರಣವಾದ ಗ್ರಾಮಗಳಿವು, ಇವರ ಆರ್ಶಿವಾದ ತಮ್ಮ ಮೇಲಿದ್ದು, ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದಾಗ ಪ್ರಧಾನಮಂತ್ರಿ ಗ್ರಾಮ್ ಸಡಾಕ್ ಯೋಜನೆಯಡಿಲ್ಲಿ ಸೇರಿ ಎರಡೂ್ಮರು ಬಾರಿ ರಸ್ತೆ ನಿರ್ಮಾಣ ಮಾಡಲಾಗಿತ್ತು. ಈ ವ್ಯಾಪ್ತಿಯಲ್ಲಿ ತೇವಾಂಶ ಹೆಚ್ಚಿರುವ ಕಾರಣ ಡಾಂಬರು ರಸ್ತೆ ಉಳಿಯುವುದಿಲ್ಲ, ಇದನ್ನು ಮನಗಂಡು ಇದೀಗ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. 4ಮೀಟರ್ ಅಗಲವಾದ 8 ಇಂಚು ದಪ್ಪದ ಕಾಂಕ್ರೀಟ್ ರಸ್ತೆ ನಿರ್ಮಾಣವಾಗಲಿದ್ದು, ರಸ್ತೆ ನಿರ್ಮಾಣದ ವೇಳೆ ಡಿ.ಕಾಳೇನಹಳ್ಳಿ ಮತ್ತು ಯಾಚೇನಹಳ್ಳಿ ಗ್ರಾಮಸ್ಥರು ಪರಸ್ಪರ ಸಹಕಾರದೊಂದಿಗೆ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬೇಕೆಂದು ಹೇಳಿದರು.

ಈ ವೇಳೆ ಎ.ಚೋಳೇನಹಳ್ಳಿ ಪಿಎಸಿಸಿಎಸ್ ಅಧ್ಯಕ್ಷ ಮಧು, ಮಾಜಿ ಅಧ್ಯಕ್ಷ ಲಲಿತಾ ಎ.ಆರ್.ನಾರಾಯಣ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಚಂದ್ರಶೇಖರ್, ಎ. ಎಚ್.ನಾಗರಾಜ್, ಮಾಜಿ ಉಪಾಧ್ಯಕ್ಷ ಜಿಮ್ ಪ್ರತಾಪ್, ಡೈರಿ ಅಧ್ಯಕ್ಷ ನರಸಿಂಹ, ಕಾರ್ಯದರ್ಶಿ ಧರ್ಮರಾಜ್, ಎಸ್,ನಾಗರಾಜ್, ಡಿ. ಕಾಳೇನಹಳ್ಳಿ ಜೆಡಿಎಸ್ ಮುಖಂಡ ರಂಗಸ್ವಾಮಿ ಸೇರಿ ಅಡಗೂರು ಗ್ರಾಮಸ್ಥರಾದ ಚಂದ್ರೇಗೌಡ, ರಾಜಣ್ಣ, ಲಕ್ಷ್ಮೇಗೌಡ, ಸಣ್ಣಪ್ಪ, ರಾಜೇಗೌಡ, ಶಿವಣ್ಣ, ಎ.ಆರ್.ಚಂದ್ರೇಗೌಡ, ರಂಗೇಗೌಡ, ನಂಜುಂಡೇಗೌಡ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರುಗಳು ಮತ್ತು ಡೈರಿ ಹಾಲಿ, ಮಾಜಿ ಸದಸ್ಯರುಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

## ನಾಳೆ ವಿದ್ಯುತ್ ವ್ಯತ್ಯಯ



**ಹಾಸನ:** ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಹಾಗೂ 110/11ಕೆ ವಿ ಗಂಡಸಿ ಮತ್ತು 66/11 ಕೆ.ವಿ ದುದ್ದ ಮತ್ತು 66/11 ಕೆ.ವಿ. ಸಾತೇನಹಳ್ಳಿ ವಿದ್ಯುತ್ ಉಪ ಕೇಂದ್ರದಲ್ಲಿ ಟರ್ಮಿನಲ್ ಬೇಗಳನ್ನ ಹಾಗೂ 220 ಕೆವಿ 110.2 ಮತ್ತು 66 ಕೆವಿ ಡಿ.ಸಿ ಎಸ್.ಸಿ ಪ್ರಸರಣ ಇರುವ ಮಾರ್ಗಗಳ ನಿರ್ಮಾಣ ಮಾರ್ಗಕ್ಕೆ ಸಂಬಂಧಿಸಿದಂತೆ 66/11 ಕೆ.ವಿ ಸಾತೇನಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿ 2 ಸಂಖ್ಯೆಯ ಟರ್ಮಿನಲ್ ಚಾಲನೆಗೊಳಿಸುವ ಕಾಮಗಾರಿಯನ್ನ ನಿರ್ವಹಿಸಲು ಫೆ.11 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ 66/11 ಕೆ.ವಿ. ಸಾತೇನಹಳ್ಳಿ ಮತ್ತು 66/11 ಕೆ.ವಿ. ಕುಂದೂರು ಮಠ ವಿದ್ಯುತ್ ವಿತರಣಾ ಕೇಂದ್ರಗಳಿಂದ ವಿದ್ಯುತ್ ಸರಬಾಜಾಗುವ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಮತ್ತು ಗ್ರಾಹಕರು ಸಹಕರಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಯೋಜನೆಗಳ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅತ್ಯಂತ ಪಾರದರ್ಶಕವಾಗಿ, ನ್ಯಾಯಸಮ್ಮತವಾಗಿ ಚುನಾವಣೆ: ಕಾರ್ಖಾನೆ ಎಂಡಿ ಕಾಂತರಾಜ್

# ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗೆ ಏಪ್ರಿಲ್‌ನಲ್ಲಿ ಚುನಾವಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶ್ರೀನಿವಾಸಪುರದಲ್ಲಿನ ಸಹಕಾರ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿದ್ದು, ಅತ್ಯಂತ ಪಾರದರ್ಶಕವಾಗಿ, ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಮುಂದಾಗಿರುವುದಾಗಿ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಕಾಂತರಾಜ್ ಅವರು ಹೇಳಿದರು.

ಕಳೆದ 10 ವರ್ಷಗಳಿಂದ ಕಾರ್ಖಾನೆ ಆಡಳಿತ ಮಂಡಳಿಗೆ ಚುನಾವಣೆ ನಡೆಸುವಂತೆ ಕೋರ್ಟ್ ಮೆಟ್ಟಿಲೇರಿದ್ದ ಪ್ರಕರಣವೀಗ ಅಂತ್ಯಗೊಂಡು ಚುನಾವಣೆ ನಡೆಸುವಂತೆ ಕೋರ್ಟ್ ಸೂಚಿಸಿದ ಹಿನ್ನಲೆಯಲ್ಲಿ ನೂತನ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆ ಸಂಬಂಧ ಚುನಾವಣೆ ಪ್ರಕ್ರಿಯೆಗಳು ಪ್ರಗತಿಯಲ್ಲಿರುವ ಹಿನ್ನಲೆಯಲ್ಲಿ ಮಾಜಿ ವಿಧಾನಪರಿಷತ್ತು ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ತಮ್ಮ ಬೆಂಬಲಿಗ



ರೊಂದಿಗೆ ಕಾರ್ಖಾನೆ ಆಡಳಿತ ಕಛೇರಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿ ಸಿದರು.

ಈ ವೇಳೆ ಮಾತನಾಡಿದ ಕಾರ್ಖಾನೆ ಎಂ.ಡಿ. 30500 ಷೇರುದಾರ ಸದಸ್ಯರಿದ್ದು, ಮತದಾರರ ಪರಿಷ್ಕರಣೆಯನ್ನು ವಿಭಾಗಮಟ್ಟದ ಅಧಿಕಾರಿ ಸೇರಿ ಇತರೆ 7ಮಂದಿ ಅಧಿಕಾರಿಗಳ ತಂಡದಿಂದ ನಡೆಸಿ ಮಾದರಿ ಮತದಾರರ ಪಟ್ಟಿಯನ್ನು ಪ್ರಕಟಿಸಿ, ಯಾವುದಾದರೂ ನ್ಯೂನತೆ ಕಂಡುಬಂದಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಒಂದೆರಡು ಆಕ್ಷೇಪಣೆ ಬಂದಿದ್ದು ಬಿಟ್ಟರೆ ಮತ್ಯಾವ ದೂರುಗಳ ಬರಲಿಲ್ಲ, ಚುನಾವಣೆ ನಡೆಸುವ ಸಂಬಂಧ ಮಾರ್ಚ್ ತಿಂಗಳಲ್ಲಿ ದಿನಾಂಕ ನಿಗದಿ ಮಾಡುವ ಸಲುವಾಗಿ ಜಿಲ್ಲಾ ಚುನಾವಣಾಧಿಕಾರಿಯವರ ಸೂಚನೆ ಮೇರೆಗೆ ಶಾಲಾ ಕೊಠಡಿಗಳ ಅವಶ್ಯಕತೆಗಾಗಿ ಚನ್ನರಾಯಪಟ್ಟಣ, ಹಾಸನ, ಕೆ.ಆರ್. ಪೇಟೆ, ಹೊಳೆನರಸೀಪುರ, ಅರಕಲಗೂಡು ಬಿ.ಇ.ಓ.ಗಳಿಗೆ ಪತ್ರ ಬರೆಯಲಾಗಿತ್ತು, ಅವರು, 10 ಮತ್ತು 12ನೇ ತರಗತಿ ಪರೀಕ್ಷೆಗಳು ಇರುವುದರಿಂದ ಮಾರ್ಚ್ ಅಂತ್ಯದ ವರೆಗೂ ಕೊಠಡಿಗಳು ಲಭ್ಯವಿರುವುದಿಲ್ಲ ಎಂಬುದನ್ನು ತಿಳಿಸಿದ ಹಿನ್ನಲೆಯಲ್ಲಿ ಏಪ್ರಿಲ್ 5 ಅಥವಾ 12 ರ ದಿನಾಂಕ ನಿಗದಿಗೆ ಅಧಿಸೂಚನೆ ಹೊರಡಿಸಿ ಎಸಿ ಯವರು ಕೊಟ್ಟ ದಿನದಂದು ಚುನಾವಣೆ ನಡೆಸಲಾಗುವುದು ಎಂದರು.

ಮಾಜಿ ವಿಧಾನಪರಿಷತ್ತು ಸದಸ್ಯ ಎಂ.ಎ.ಗೋಪಾಲಸ್ವಾಮಿ ಮಾತನಾಡಿ, ಮಾರ್ಚ್ 18ಕ್ಕೆ ಚುನಾವಣೆ ನಿಗದಿ ಎಂಬ ಮಾತು ಕೇಳಿಬಂದ ಹಿನ್ನಲೆಯಲ್ಲಿ ದಿನಾಂಕ ಗೊತ್ತುಪಡಿಸಿಕೊಳ್ಳುವ ವಿಚಾರಕ್ಕೆ ಕಾರ್ಖಾನೆ ಆಡಳಿತ ಕಛೇರಿಗೆ ಭೇಟಿ ನೀಡಿ, ಎಂ.ಡಿ. ಯವರಿಂದ ಮಾಹಿತಿ ಪಡೆಯಲಾಗಿದೆ. ಮತದಾರ ಮಾದರಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ. ಇದುವರೆವಿಗೂ ಪಾರದರ್ಶಕವಾಗಿ ಮಾಡಿದ್ದಾರೆ. ಮುಂದೆಯೂ ನಿಯಮಾನುಸಾರ, ಕಾನೂನು ಪ್ರಕಾರ ನಡೆಯಬೇಕು ಎಂಬುದು ನಮ್ಮ ಆಶಯ, ಹಿಂದೆಲ್ಲ ಚುನಾವಣೆ ವಿಚಾರದಲ್ಲಿ ಸಾಕಷ್ಟು ಗಲಾಟೆ, ಗದ್ದಲಗಳು ನಡೆದಿವೆ. ಆದು ಮರಕಳಿಸಬಾರದು ಎಂಬುದು ನಮ್ಮ ಉದ್ದೇಶ. 15 ವರ್ಷ ಹಿಂದ ಚುನಾವಣೆ ನಡೆದಿದ್ದು, ಅವಧಿ ಮುಗಿದಿದ್ದರೂ ಚುನಾವಣೆ ನಡೆಸದ ಬಗೆ ಆಡಳಿತ ಮಂಡಳಿ ಕೋರ್ಟ್‌ನಿಂದ ತಡೆಯಾಜ್ಞೆ ತಂದು ಅಧಿಕಾರದಲ್ಲಿದ್ದರು, ಇದೀಗ ನಾವು ಕೋರ್ಟ್ ಮೆಟ್ಟಿಲೇರಿದ ಪರಿಣಾಮ ಇದೀಗ ಚುನಾವಣೆ ನಡೆಸುವಂತೆ ತೀರ್ಪು ನೀಡಿದ ಹಿನ್ನಲೆಯಲ್ಲಿ ಇದೀಗ ಚುನಾವಣೆ ನಡೆಯುತ್ತಿದೆ. ಮತದಾರ ತೀರ್ಪು ಅಂತಿಮ, ಜೆಡಿಎಸ್‌ನವರೂ, ನಾವೋ ಅವರು ಕೊಟ್ಟ ತೀರ್ಮಾನದಂತೆ ಅಧಿಕಾರ ಒಟ್ಟಿನಲ್ಲಿ ಚುನಾವಣೆ ಕಾನೂನು ಪ್ರಕಾರವಾಗಬೇಕು ಎಂಬುದು ನಮ್ಮ ಆಶಯವೆಂದರು.

ಈ ವೇಳೆ ಅಣತಿ ಆನಂದ್, ಸಾಸಲುಪುರ ಶಿವರಾಂ, ಸಿ.ಟಿ. ಅಶೋಖ್‌ಕುಮಾರ್, ತಮ್ಮಯ್ಯ, ಗನ್ನಿ ಗಿರೀಶ್, ಪ್ರವೀಣ್, ರಘು, ಕಬ್ಬಾಳು ಮಹೇಶ್, ಮೋಹನ್ ಇನ್ನಿತರರು ಉಪಸ್ಥಿತರಿದ್ದರು,


ಕರ್ನಾಟಕ ಸರ್ಕಾರ

**ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ಚನ್ನರಾಯಪಟ್ಟಣ ವಿಭಾಗ, ಚನ್ನರಾಯಪಟ್ಟಣ**

(ಕಛೇರಿ ದೂರವಾಣಿ ಸಂಖ್ಯೆ:081762-00088) Email ID: seotsccrp60@gmail.com

ಸಂ/ರೇಸನಿ/ಚರಾಪ/ಹೊ.ಗು.ವಾ/01/2025-26 ದಿನಾಂಕ:07/02/2026

**ದ್ವಿ-ಲಕೋಟೆ ಪದ್ಧತಿ ಟೆಂಡರ್ ಪ್ರಕಟಣೆ**

ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ ಚನ್ನರಾಯಪಟ್ಟಣ ಕಛೇರಿಗೆ ದಿನಾಂಕ: 01/03/2026 ರಿಂದ ಒಂದು ವರ್ಷದ ಅವಧಿಗೆ ಸರ್ಕಾರಿ ಕಾರ್ಯ ನಿಮಿತ್ತವಾಗಿ ಖಾಸಗಿ ವಾಹನವನ್ನು ಬಾಡಿಗೆ ಆಧಾರದಲ್ಲಿ (ಟಾಟಾಜೆಸ್ಟ್ / ಮಾರುತಿ ಸ್ವಿಫ್ಟ್ ಡಿಸೈರ್ / ಮಾರುತಿ ಸ್ವಿಫ್ಟ್ / ಮಾರುತಿ ಟೂರ್ಸ್ / ಮಹಿಂದ್ರಾ ಬುಲೆರೋ) ಹವಾ ನಿಯಂತ್ರಣ ರಹಿತ ವಾಹನ ಪೂರೈಸಲು ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ಅರ್ಹ ಟ್ರಾವೆಲ್ಸ್ ಏಜೆನ್ಸಿಗಳಿಂದ ದ್ವಿ-ಲಕೋಟೆ ಪದ್ಧತಿ ಟೆಂಡರ್ ಕರೆಯಲಾಗಿದೆ. ಕ್ರ.ಸಂ.ವಿವರಗಳು: 1)ಟೆಂಡರ್ ಪ್ರಕಟಣೆಯ ದಿನಾಂಕ ದಿನಾಂಕ:07/02/2026 2)ಟೆಂಡರ್ ಅರ್ಜಿ ಶುಲ್ಕ ರೂ:100.00 3)ಇ.ಎಂ.ಡಿ ಮೊತ್ತ ರೂ:10500.00 4)ಟೆಂಡರ್ ಫಾರಂ ಅರ್ಜಿಗಳನ್ನು ಕಛೇರಿಯಲ್ಲಿ ಪಡೆಯುವ ದಿನಾಂಕ ಮತ್ತು ವೇಳೆ ದಿನಾಂಕ:09/02/2026 ರಿಂದ ದಿನಾಂಕ:18/02/2026 ರ ಸಂಜೆ 4.00 ಘಂಟೆಗೆ ವರೆಗೆ 5)ಕಛೇರಿಯಲ್ಲಿ ಅರ್ಜಿ ಸಲ್ಲಿಸಲುಕೊನೆಯ ದಿನಾಂಕ ಮತ್ತು ವೇಳೆ ದಿನಾಂಕ:19/02/2026 ರ ಸಂಜೆ 3.00 ಗಂಟೆಗೆ 6)ಟೆಂಡರ್ ತೆರೆಯುವ ಸ್ಥಳ:- ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ ಚನ್ನರಾಯಪಟ್ಟಣ ವಿಭಾಗ ಚನ್ನರಾಯಪಟ್ಟಣ. 7)ತಾಂತ್ರಿಕ ಬಿಡ್‌ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ:21/02/2026 ರ ಮಧ್ಯಾಹ್ನ 12.00 ಗಂಟೆಗೆ 8)ಆರ್ಥಿಕ ಬಿಡ್‌ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ:23/02/2026 ರ ಮಧ್ಯಾಹ್ನ 12.00 ಗಂಟೆಗೆ

ಸಹಿ/-ರೇಷ್ಮೆ ಸಹಾಯಕ ನಿರ್ದೇಶಕರು,
ಚನ್ನರಾಯಪಟ್ಟಣ ವಿಭಾಗ, ಚನ್ನರಾಯಪಟ್ಟಣ


ವಾಸಾಸಂಇ/ಹಿಸನಿ/ಹಾಸನ/1043/ಕೆಎಸ್‌ಎಂಸಿಎ/2025-26

# ಎಐ ಕಂಟೆಂಟ್ ನಿಯಂತ್ರಣಕ್ಕೆ ಕೇಂದ್ರ ಕಠಿಣ ಕಾನೂನು

## ನಿರ್ದೇಶನದ ಮೂರು ಗಂಟೆಯೊಳಗೆ ಡಿಲೀಟ್ ಆಗಬೇಕು | ಫೆ.20 ರಿಂದ ನಿಯಮ ಜಾರಿ

• ಪ್ರಜೋದಯ ವರದಿ

**ನವದೆಹಲಿ:** ಆನ್‌ಲೈನ್ ವೇದಿಕೆಗಳಲ್ಲಿ ಡೀಪ್ ಫೇಕ್ ಹಾಗು ಕೃತಕ ಬುದ್ಧಿಮತ್ತೆ (ಎಐ) ಮೂಲಕ ಸೃಜಿಸಿದ ವಿಷಯವಸ್ತು (ಕಂಟೆಂಟ್) ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಮಂಗಳವಾರ ಕಠಿಣ ಆದೇಶ ಹೊರಡಿಸಿದ್ದು, ಯಾವುದೇ ಪ್ರಾಧಿಕಾರ ಅಥವಾ ಕೋರ್ಟ್ ಸೂಚಿಸಿದ ಮೂರು ಗಂಟೆಯೊಳಗೆ ಅಂತಹ ಪೋಸ್ಟ್‌ಗಳನ್ನು ತೆಗೆದುಹಾಕಬೇಕು ಎಂದಿದೆ.




ಅದಕ್ಕಾಗಿ 2021ರ ಐಟಿ ಕಾಯ್ದೆಗೆ ಸರ್ಕಾರ ತಿದ್ದುಪಡಿ ತರಲಾಗಿದ್ದು, ಫೆ.20ರಿಂದಲೇ ಜಾರಿಗೆ ಬರಲಿದೆ. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಹೊರಡಿಸಿದ ಗೆಜೆಟ್ ಅಧಿಸೂಚನೆಯ ಪ್ರಕಾರ, ಸಾಮಾಜಿಕ ಜಾಲ ತಾಣ ವೇದಿಕೆಗಳು ಸರ್ಕಾರ ಅಥವಾ ನ್ಯಾಯಾಲಯ ಆದೇಶ ಮಾಡಿದ 3 ಗಂಟೆಯೊಳಗೆ ಅಂತಹ ಪೋಸ್ಟ್‌ಗಳನ್ನು ತೆಗೆದುಹಾಕಬೇಕು. ಈ ಹಿಂದೆ ಈ ಮಿತಿ 36 ಗಂಟೆ ಇತ್ತು. ಎಐ ರಚಿತ ವಿಷಯಗಳಿಗೆ ಕಡ್ಡಾಯವಾಗಿ ಲೇಬಲಿಂಗ್ (ಎಐ ಮೂಲಕ ರಚಿಸಿದ ಎಂದು ನಮೂದಿಸಬೇಕು) ಮಾಡಬೇಕು. ಕೃತಕವಾಗಿ ರಚಿಸಲಾದ ವಿಷಯಗಳನ್ನು ಹಂಚುವಾಗಲೂ ಲೇಬಲ್ ಮಾಡಬೇಕೆಂದು ನಿಯಮದಲ್ಲಿ ಹೇಳಲಾಗಿದೆ.

ಎಐ ಮೂಲಕ ರಚಿಸಲಾದ ಕಾನೂನುಬಾಹಿರ, ಮೋಸ, ಲೈಂಗಿಕ ಶೋಷಣೆಯ, ಒಪ್ಪಿಗೆಯಿಲ್ಲದ ಅಥವಾ ಸುಳ್ಳು ದಾಖಲೆ, ಮಕ್ಕಳ ಮೇಲಿನ ದೌರ್ಜನ್ಯ, ಸ್ಫೋಟಕ ಮುಂತಾದ ವಿಷಯವನ್ನು ತಡೆಯಲು ಪ್ಲಾಟ್‌ಫಾರ್ಮ್‌ಗಳು ಸ್ವಯಂ ಚಾಲಿತ ಸಾಧನಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದೆ.

**ಸಂಶೋಧಕ ಮೃಣಾಂಕ್ ಶರ್ಮಾ ರಾಜೀನಾಮೆ**

ಜಗತ್ತೇ ಕೃತಕ ಬುದ್ಧಿಮತ್ತೆಯ ಮೇಲೆ ನಿಂತಿದೆ ಎಂಬ ಬಗ್ಗೆ ಚರ್ಚೆ ನಡೆಯುತ್ತಿರುವ ದಿನಮಾನಗಳಲ್ಲೇ ಆಂಥ್ರೋಪಿಕ್‌ನ ಎಐ ಸುರಕ್ಷತಾ ವಿಭಾಗದ ಸಂಶೋಧನಾ ತಂಡದ ಮುಖ್ಯಸ್ಥ ಮೃಣಾಂಕ್ ಶರ್ಮಾ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ.

ಈ ರೀತಿ ರಾಜೀನಾಮೆ ನೀಡಿದವರಲ್ಲಿ ಅವರೇ ಮೊದಲಿಗರೇನಲ್ಲ. ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಲ್ಲಿ ಕಾರ್ಯ ನಿರ್ವಹಿಸಿದ್ದ ಹರ್ಷ ಮೆಹ್ತಾ ಮತ್ತು ಪ್ರಮುಖ ವಿಜ್ಞಾನಿ ಬೆಹ್ನಮ್ ನೆಯ್ಶಾಬರ್ ಕಳೆದ ವಾರವಷ್ಟೇ ರಾಜೀನಾಮೆ ಸಲ್ಲಿಸಿದ್ದು ತಮ್ಮ ಎಕ್ಸ್ ಪೋಸ್ಟ್‌ಗಳಲ್ಲಿ ಹೊಸದನ್ನು ಪ್ರಾರಂಭಿಸಲು ಆಂಥ್ರೋಪಿಕ್ ತೊರೆದಿದ್ದೇವೆ ಎಂದು ಹೇಳಿದ್ದರು. ಆದರೆ ಇದೀಗ ಮೃಣಾಂಕ್ ಶರ್ಮಾ ಅವರು ತಮ್ಮ ವಿವರವಾದ ರಾಜೀನಾಮೆ ಪತ್ರವನ್ನು ಪೋಸ್ಟ್ ಮಾಡಿರುವುದು ವೈರಲ್ ಆಗಿದೆ. ಜೊತೆಗೆ ಅನೇಕ ಆಯಾಮಗಳಲ್ಲಿ ಎಐ ಭವಿಷ್ಯದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಅಮೇರಿಕಾದ ಎಐ ಕಂಪನಿಯಾದ ಆಂಥ್ರೋಪಿಕ್‌ನ ಪ್ರಧಾನ ಕಚೇರಿ ಕ್ಯಾಲಿಫೋರ್ನಿಯಾದ ಸ್ಯಾನ್ ಫ್ರಾನ್ಸಿಸ್ಕೋ ದಲ್ಲಿದೆ. ತನ್ನ ಮಾದರಿ ಕ್ಲೌಡ್‌ನೊಂದಿಗೆ ಅದು ವಿಶ್ವವಿಖ್ಯಾತ ವಾಗಿತ್ತು. ಅದರ ಎಐ ಸುರಕ್ಷತಾ ವಿಭಾಗದ ಮುಖ್ಯಸ್ಥರೇ ರಾಜೀನಾಮೆ ನೀಡಿರುವುದು ಅಚ್ಚರಿಕೆ ಕಾರಣವಾಗಿದೆ. ಜೊತೆಗೆ ಅವರು ಹೇಳಿರುವ ವಿಚಾರ ಸಹ ಗಂಭೀರವಾಗಿವೆ.

**ರಾಜೀನಾಮೆಗೆ ಕಾರಣ**

ಮೃಣಾಲ್ ಶರ್ಮಾ ಅವರು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ರಾಜೀನಾಮೆ ಪತ್ರದಲ್ಲಿ ಆಂಥ್ರೋಪಿಕ್‌ನಲ್ಲಿ ನಾನು ಬಯಸಿರುವುದನ್ನು ಸಾಧಿಸಿದ್ದು ಇದೀಗ ತೊರೆಯಲು ಬಯಸಿದ್ದೇನೆ. ಎರಡು ವರ್ಷಗಳ ಹಿಂದೆ ನಾನು ಸ್ಯಾನ್ ಫ್ರಾನ್ಸಿಸ್ಕೋಗೆ ಬಂದಿದ್ದು ನನ್ನ ಪಿಎಚ್‌ಡಿ ಮುಗಿಸಿ ಮತ್ತು ಸುರಕ್ಷತೆಗೆ ಕೊಡುಗೆ ನೀಡಲು ಬಯಸಿದ್ದೆ. ಅದೃಷ್ಟವಶಾತ್ ನಾನು ಅಂದುಕೊಂಡಿರುವ ರೀತಿಯಲ್ಲಿ ಕೊಡುಗೆ ನೀಡಲು ಸಾಧ್ಯವಾಗಿದೆ ಎಂಬುದು ನನ್ನ ಭಾವನೆ ಯಾಗಿದೆ ಎಂದು ತಿಳಿಸಿದ್ದಾರೆ. ಇಷ್ಟೆಲ್ಲಾ ಆದ ಬಳಿಕ ಅವರು ಎಐನ ದುಷ್ಪರಿಣಾಮಗಳ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಎಐನಿಂದಾಗಿ ಜಗತ್ತು ಅಪಾಯದಲ್ಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ. ಎಐಗಳು ಹೇಗೆ ನಮ್ಮೊಳಗಿನ ಮಾನವೀಯತೆಯನ್ನು ಕುಗ್ಗಿಸಬಹುದು ಅಥವಾ ನಮ್ಮ ಮಾನವೀಯತೆಯನ್ನು ವಿರೂಪಗೊಳಿಸಬಹುದು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ನಮ್ಮ ಪರಿಸ್ಥಿತಿಯನ್ನು ನಾನು ನಿರಂತರವಾಗಿ ಲೆಕ್ಕ ಮಾಡುತ್ತಿದ್ದೇನೆ. ಜಗತ್ತು ಇಂದು ಅಪಾಯದಲ್ಲಿದೆ. ಆದರೆ ಅದು ಎಐ ಅಥವಾ ಜೈವಿಕ ಶಸ್ತ್ರಾಸ್ತ್ರಗಳಿಂದ ಮಾತ್ರವಲ್ಲ, ಈ ಕ್ಷಣದಲ್ಲಿಯೇ ತೆರೆದುಕೊಳ್ಳುತ್ತಿರುವ ಪರಸ್ಪರ ಸಂಬಂಧಗಳ ಬಿಕ್ಕಟ್ಟುಗಳು ಹೆಚ್ಚುತ್ತಿರುವುದು ಸಹ ಕಾರಣ. ಎಐನ ಪರಿಣಾಮದಿಂದಾಗಿ ನಮ್ಮ ಬುದ್ಧಿವಂತಿಕೆ ಮಿತಿಯನ್ನು ಕುಗ್ಗಿಸುತ್ತಿದ್ದು, ಪ್ರಪಂಚದ ಮುಂದೆ ನಮ್ಮ ಸಾಮರ್ಥ್ಯಕ್ಕೆ ಮಿತಿಯನ್ನು ಹಾಕುತ್ತಿದೆ ಎಂದು ಶರ್ಮಾ ಕಳವಳ ವ್ಯಕ್ತಪಡಿಸಿದ್ದಾರೆ.

## ಜಿಲ್ಲಾಧಿಕಾರಿ ಸಂಧಾನ: ಎನ್.ಹೆಚ್-206 ಅಡೆತಡೆ ನಿವಾರಣೆ

» ಮೊದಲನೇ ಪುಟದಿಂದ

ಸಮಸ್ಯೆ ಬಗೆ ಹರಿಸಲು ಜಿಲ್ಲಾಧಿಕಾರಿ ಸಮಯ ಕೋರಿರುವುದರಿಂದ ನೊಂದ ರೈತರು ಒಪ್ಪಿಗೆ ಸೂಚಿಸಿ ದ್ದಾರೆಂದರು.

ತಹಶೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್, ಗ್ರಾಮದ ಮುಖಂಡರಾದ ಶಿವಮೂರ್ತಪ್ಪ, ಕುಮಾರ್, ಸಿದ್ದಮರಿಯಪ್ಪ, ಮನು ಸೇರಿ ನೂರಾರು ರೈತರು ಸಭೆಯಲ್ಲಿ ಭಾಗವಹಿಸಿದ್ದರು.

ಗ್ರಾಮದ ಮುಖಂಡ ಡೇರಿ ಶಿವಣ್ಣ ಅವರು ಮಾತನಾಡಿ, ಜಿಲ್ಲಾಧಿಕಾರಿಯವರು ವೈಜ್ಞಾನಿಕವಾಗಿ ಪರಿಹಾರ ನೀಡುವ ಭರವಸೆ ನೀಡಿದ್ದು, ಆ ನಿಟ್ಟಿನಲ್ಲಿ 195 ರೈತರು ಜಿಲ್ಲಾಧಿಕಾರಿಗೆ ಸೂಕ್ತ ಪರಿಹಾರಕ್ಕಾಗಿ ಮೇಲ್ಮನವಿ ಸಲ್ಲಿಸಲಿದ್ದೇವೆ. ಮುಂದಿನ 15 ರಿಂದ 20 ದಿನಗಳಲ್ಲಿ ವೈಜ್ಞಾನಿಕ ಪರಿಹಾರ ಬಿಡುಗಡೆಗೆ ಆದೇಶ ಮಾಡಲಿದ್ದೇನೆಂದು ಲಿಖಿತ ರೂಪದಲ್ಲಿ ಪತ್ರವನ್ನು ಜಿಲ್ಲಾಧಿಕಾರಿ ನೀಡಿದ್ದಾರೆ. ಈ ಬೆಳವಣಿಗೆ ರೈತರಿಗೆ ತೃಪ್ತಿ ತಂದಿದೆ. ಹಲವಾರು ಜಿಲ್ಲಾಧಿಕಾರಿ ಬಂದು ಹೋಗಿದ್ದರೂ ಪರಿಹಾರ ಕಾಣದಿದ್ದ ಸುಮಾರು 40 ಎಕರೆ ಜಮೀನುಗಳ ಮಾಲೀಕರಾದ 200ಕ್ಕೂ ಹೆಚ್ಚು ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಿಲ್ಲಾಧಿಕಾರಿ ನೀಡಿರುವ ಭರವಸೆಯಂತೆ ಶೀಘ್ರದಲ್ಲಿ ವೈಜ್ಞಾನಿಕ ಪರಿಹಾರ ಹಣ ಬಿಡುಗಡೆ ಮಾಡದಿದ್ದರೆ ಪುನಃ ಹೋರಾಟಕ್ಕೆ ಇಳಿಯಲಿದ್ದೇವೆ ಎಂದರು.

## ವಾಹನ ಡಿಕ್ಕಿ : ವ್ಯಕ್ತಿ ಸಾವು


• ಪ್ರಜೋದಯ ವರದಿ

**ಹಾಸನ:** ಮಹೇಂದ್ರ ಬಲೊರೋ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಹಾಲುವಾಗಿಲು ಸಮೀಪ ನಡೆದಿದೆ.

ವಿದ್ಯಾನಗರದ ಗಿಡ್ಡೇಗೌಡ (59) ಮೃತರು. ಆಲೂರು ತಾಲ್ಲೂಕು ಪಾಳ್ಯ ಹೋಬಳಿ ಚಿಗಳೂರು ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಎದುರಿನಿಂದ ವೇಗವಾಗಿ ಬಂದ ಬಲೊರೋ ಚಾಲಕ ಡಿಕ್ಕಿ ಮಾಡಿದ್ದಾನೆ. ಗಂಭೀರ ಗಾಯಗೊಂಡಿದ್ದ ಅವರನ್ನು ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸರ್ಕಾರಕ್ಕೆ ಸಾವಿರ ದಿನ: ಫೆ.14ಕ್ಕೆ ಹಾವೇರಿಯಲ್ಲಿ ಸಮಾವೇಶ

• ಪ್ರಜೋದಯ ವರದಿ



**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಒಂದು ಸಾವಿರ ದಿನಗಳು ಪೂರೈಸುತ್ತಿರುವ ಹಿನ್ನಲೆಯಲ್ಲಿ ಫೆ.14 ರಂದು ಹಾವೇರಿಯಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿ, ಅಂದು ಒಂದು ಲಕ್ಷ ಜನರಿಗೆ ಹಕ್ಕು ಪತ್ರ ವಿತರಿಸಲಾಗುವುದು. ಹಕ್ಕು ಪತ್ರ ಎಂದರೆ ಕೇವಲ ಕಾಗದ ಅಲ್ಲ. ಇ-ಸ್ವತ್ತು ಕೊಡಬಹುದಾದ ಗಣಕೀಕೃತ ದಾಖಲೆ. ಯಾರೂ ನಕಲು ಮಾಡಲು ಸಾಧ್ಯವಾಗದ ಹಕ್ಕು ಪತ್ರ ಕೊಡಲಿದ್ದೇವೆಂದು ಹೇಳಿದರು.

ನಮ್ಮ ಸರ್ಕಾರ ಶೇ.100ರಷ್ಟು ಭೂ ಗ್ಯಾರಂಟಿ ಕೊಡುತ್ತಿದೆ. ಹಕ್ಕುಪತ್ರದ ಜೊತೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಕೂಡ ಮಾಡಿಕೊಡುತ್ತೇವೆ. ದಾಖಲೆಗಳಿಲ್ಲದ ಗ್ರಾಮ ಗಳಲ್ಲಿ ವಾಸಿಸುವವರಿಗೆ ಹಕ್ಕುಪತ್ರ ನೀಡುತ್ತಿದ್ದೇವೆ. ದರ್ಖಾಸ್ತು, ಬಗರ್ ಹುಕುಂನಲ್ಲಿ ಮಂಜೂರಾದ ಜಮೀನುಗಳಿಗೆ ದಾಖಲೆ ಇರಲಿಲ್ಲ. ಅತಂತ್ರದಲ್ಲಿ ಬದುಕುತ್ತಿರುವವರಿಗೆ ಭರವಸೆ ನೀಡಿ ದ್ದೇವೆ. ಇದು ನಮ್ಮ ಸರ್ಕಾರದ ಮಹತ್ವದ ಸಾಧನೆಯೆಂದರು.

ಸರ್ಕಾರಕ್ಕೆ ಭೂಮಾಲೀಕತ್ವದ ವಿಚಾರದಲ್ಲಿ ಸ್ಪಷ್ಟತೆ ಇದೆ. ರಾಜ್ಯದಲ್ಲಿ ಸುಮಾರು 49 ಲಕ್ಷ ಜಮೀನುಗಳು ಮೃತರ ಹೆಸರಿನಲ್ಲಿ ಇವೆ. ಸಂಬಂಧಪಟ್ಟವರ ಹೆಸರಿಗೆ ಜಮೀನು ಮಾಡಿಕೊಡಲು ಅಧಿಕಾರಿಗಳು ಶ್ರಮಿಸುತ್ತಿದ್ದಾರೆ. ಭೂಮಾಲೀಕತ್ವ ಎಂದರೆ ಭೂವ್ಯಾಜ್ಯ ಎನ್ನುವ ಹಾಗಾಗಿದೆ. ಕೋರ್ಟ್, ಕಚೇರಿ ಅಲೆಯುವುದು ಹೆಚ್ಚಾಗಿತ್ತು. ಆದರೆ, ಈಗ ಸರ್ಕಾರದಿಂದಲೇ ಹಕ್ಕುಪತ್ರ ವಿತರಿಸಲಾಗುತ್ತಿದೆ ಎಂದು ಹೇಳಿದರು.

## ಹೆದ್ದರಿಕೊಂಡು ಪಾಕಿಸ್ತಾನ ಬೆದರಿಕೆ ಹಿಂಪಡೆದಿದೆ: ಒಮರ್ ಅಬ್ದುಲ್ಲಾ

• ಪ್ರಜೋದಯ ವರದಿ

**ಜಮ್ಮು:** ಟಿ-20 ವಿಶ್ವಕಪ್‌ನಲ್ಲಿ ಭಾರತದ ವಿರುದ್ಧ ಪಂದ್ಯವನ್ನು ಬಹಿಷ್ಕರಿಸುವುದಾಗಿ ಹೇಳಿದ್ದ ಪಾಕಿಸ್ತಾನವು, ತನ್ನ ನಿರ್ಧಾರದಿಂದ ಹಿಂದೆ ಸರಿದಿದೆ. ಅದನ್ನು ವ್ಯಂಗ್ಯ ಮಾಡಿರುವ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಬೆದರಿಕೆ ಹಾಕುವವರು ಅದಕ್ಕೆ ಬದ್ಧರಾಗಿರಬೇಕು, ಭಯಬಿದ್ದು ಅದನ್ನು ಹಿಂಪಡೆಯಬಾರದು ಎಂದಿದ್ದಾರೆ.

ಭಾರತ ವಿರುದ್ಧ ಪಂದ್ಯವಾಡಬಾರದೆಂದು ಪಾಕಿಸ್ತಾನವೇ ನಿರ್ಧರಿಸಿತ್ತು. ಇದೀಗ ಅವರ ನಿಲುವನ್ನು ಅವರೇ ಹಿಂಪಡೆದಿದ್ದಾರೆ. ತನ್ನ ನಿಲುವಿಗೆ ಬದ್ಧವಾಗಿರಲು ಸಾಧ್ಯವಿಲ್ಲದವರು, ಬೆದರಿಕೆ ಹಾಕಲೇಬಾರದು ಎಂದು ಒಮರ್ ಅಬ್ದುಲ್ಲಾ ಹೇಳಿದ್ದಾರೆ.

ಟೂರ್ನಿಯ ವೇಳಾಪಟ್ಟಿ ಬಿಡುಗಡೆಯಾದ ನಂತರ ಅವರು ನಾಟಕ ಮಾಡುವುದನ್ನು ಬಿಟ್ಟು, ಸುಮ್ಮನೆ ಬಂದು ಪಂದ್ಯವಾಡಿ ಹೋಗಬೇಕು. ಪಂದ್ಯದ ವೇಳೆ ಏನಾಗಬೇಕೋ ಅದೇ ಆಗುತ್ತದೆ ಎಂದಿದ್ದಾರೆ.

ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ ನಡೆಯುತ್ತಿರುವ ಚುಟುಕು ವಿಶ್ವಕಪ್‌ನಲ್ಲಿ ಟೀಂ ಇಂಡಿಯಾ ವಿರುದ್ಧದ ಲೀಗ್ ಪಂದ್ಯವನ್ನು ಬಹಿಷ್ಕರಿಸುವುದಾಗಿ ಪಾಕಿಸ್ತಾನ ಹೇಳಿತ್ತು. ಐಸಿಸಿ ನಡುವಿನ ವರ್ಚುವಲ್ ಸಭೆಯ ನಂತರ, ಪಾಕ್ ತನ್ನ ನಿರ್ಧಾರವನ್ನು ಬದಲಿಸಿಕೊಂಡಿದೆ.

ಇದೀಗ ಪಾಕಿಸ್ತಾನವು ಫೆ.15ರಂದು ಟೀಂ ಇಂಡಿಯಾ ವಿರುದ್ಧ ಕೋಲಂಬೊದಲ್ಲಿ ಪಂದ್ಯವಾಡಲಿದೆ.

## ರೀ-ಕೆವೈಸಿ ಕಡ್ಡಾಯ: ವಿಳಂಬವಾದರೆ ಖಾತೆ ಬ್ಲಾಕ್

» ಮೊದಲನೇ ಪುಟದಿಂದ

ಕೆನರಾ ಬ್ಯಾಂಕ್ ಡಿವಿಜನ್ ಮ್ಯಾನೇಜರ್ ನೀರಿಜ ಅವರು ಮಾತನಾಡಿ, ಸರ್ಕಾರದ ಸಮಾಜ ಮುಖಿ ಯೋಜನೆಗಳು ಪ್ರತಿಯೊಬ್ಬ ನಾಗರಿಕನಿಗೂ ತಲುಪಬೇಕೆಂಬ ಉದ್ದೇಶದಿಂದ ಈ ಜಾಗೃತಿ ಜಾಥಾ ಆಯೋಜಿಸಲಾಗಿದೆ. ಹಣವನ್ನು ಜಮೆ ತೆಗೆಯುವ ಸಂದರ್ಭದಲ್ಲಿನ ಸುರಕ್ಷತೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಹೇಳಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್ ರೀಜನಲ್ ಮ್ಯಾನೇಜರ್ ರಾಚಪ್ಪ ಅವರು ಮಾತನಾಡಿ, ಜಿಲ್ಲೆಯಲ್ಲಿ 60 ಶಾಖೆಗಳಿದ್ದು, ಹಣಕಾಸು ಸಪ್ತಾಹದ ಅಂಗವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆನ್‌ಲೈನ್ ವ್ಯವಹಾರಗಳಲ್ಲಿ ಹೆಚ್ಚುತ್ತಿರುವ ಫ್ರಾಡ್ ಕುರಿತು ಪ್ರತಿಯೊಬ್ಬರಲ್ಲೂ ತಿಳುವಳಿಕೆ ಮೂಡಿಸುವುದೇ ನಮ್ಮ ಗುರಿ ಎಂದರು. ಜಾಗೃತಿ ಜಾಥಾದಲ್ಲಿ ವಿವಿಧ ಬ್ಯಾಂಕ್‌ಗಳ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಭಾಗವಹಿಸಿದ್ದರು.

## ಮಲೆನಾಡು ಭಾಗಕ್ಕೆ ನೆಟ್‌ವರ್ಕ್ ವ್ಯವಸ್ಥೆ ಕಲ್ಪಿಸಿ

» ಮೊದಲನೇ ಪುಟದಿಂದ

ಹೊಳೆನರಸೀಪುರ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ಒಂದು ಲೈನ್ ಹಾಗು ಪ್ಲಾಟ್‌ಫಾರ್ಮ್ ವಿಸ್ತರಿಸಲು ಕ್ರಮ ಜರುಗಿಸಲು ಪ್ರಸ್ತಾವನೆ ಸಲ್ಲಿಸಿದರು. ಹೊಳೆನರಸೀಪುರದಲ್ಲಿ ಪ್ರಸ್ತುತ ಕೇವಲ ಎರಡು ರೈಲು ಹಳಿಗಳು ಮಾತ್ರ ಇದ್ದು, ಸಂಚಾರ ದಟ್ಟಣೆ ಹಾಗು ಪ್ರಯಾಣಿಕರಿಗೆ ಸಮಸ್ಯೆ ಯಾಗುತ್ತಿದೆ. ಪ್ಲಾಟ್‌ಫಾರ್ಮ್ ವಿಸ್ತರಣೆ ಮತ್ತು ಸಂಬಂಧಿತ ಕಾಮಗಾರಿಗಳಿಗೆ ಅಗತ್ಯ ಭೂಮಿಯನ್ನು ರಾಜ್ಯ ಸರ್ಕಾರ ಪಿಡಬ್ಲ್ಯೂಡಿ ಮೂಲಕ ರೈಲ್ವೆಗೆ ಹಸ್ತಾಂತರಿಸಲು ಒಪ್ಪಿಕೊಂಡಿರುವ ಹಿನ್ನಲೆ, ಕನಿಷ್ಠ ಒಂದು ಹೆಚ್ಚುವರಿ ರೈಲು ಹಳಿ ನಿರ್ಮಾಣ ಹಾಗು ಪ್ಲಾಟ್‌ಫಾರ್ಮ್ ವಿಸ್ತರಣೆಗೆ ಅನುಮೋದನೆ ನೀಡುವಂತೆ ಮನವಿ ಮಾಡಿದರು.

## ಬಾಸ್ ಮಿಂಚು: ಡಚ್ಚರ ಸೂಪರ್ 8 ಹಂತ ಜೀವಂತ

• ಪ್ರಜೋದಯ ವರದಿ




**ನವದೆಹಲಿ:** ಬಾಸ್ ಡಿ ಲೀಡೆ (20ಕ್ಕೆ2 ಮತ್ತು ಔಟಾಗದೇ 72) ಅವರ ಆಲ್ ರೌಂಡ್ ಆಟದ ನೆರವಿನಿಂದ ನೆದರ್ಲೆಂಡ್ಸ್ ತಂಡವು ಟಿ-20 ವಿಶ್ವಕಪ್ ಎ ಗುಂಪಿನ ಪಂದ್ಯದಲ್ಲಿ ನಮೀಬಿಯಾ ತಂಡವನ್ನು ಸೋಲಿಸಿತು. ಆ ಮೂಲಕ ಸೂಪರ್ 8 ಹಂತಕ್ಕೇರುವ ಅವಕಾಶ ಜೀವಂತವಾಗಿ ಉಳಿಸಿತು.

ಮೊದಲ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಮೇಲುಗೈ ಸಾಧಿಸಿ ಕೊನೆಗೆ ನಿರಾಶೆ ಅನುಭವಿಸಿದ ಡಚ್ಚರ ಪಡೆ ಇಲ್ಲಿ ಪ್ರಬುದ್ಧವಾಗಿ ಆಡಿತು. ಶಿಸ್ತುಬದ್ಧ ಬೌಲಿಂಗ್ ಪ್ರದರ್ಶಿಸಿ ನಮೀಬಿಯಾ ತಂಡವನ್ನು 8 ವಿಕೆಟ್‌ಗೆ 156 ರನ್‌ಗಳಿಗೆ ಸೀಮಿತಗೊಳಿಸಿತು. ಇನ್ನೂ 12 ಎಸೆತಗಳಿರುವಂತೆ 3 ವಿಕೆಟ್ ನಷ್ಟದಲ್ಲಿ 157 ರನ್ ಹೊಡೆಯಿತು. ಇದು ವಿಶ್ವಕಪ್‌ನಲ್ಲಿ ನಮೀಬಿಯಾಕ್ಕೆ ಮೊದಲ ಪಂದ್ಯವಾಗಿದ್ದು, ಅಲ್ಲಲ್ಲಿ ಉತ್ತಮ ಆಟವಾಡಿತು. ದಕ್ಷಿಣ ಆಫ್ರಿಕಾ ವಿರುದ್ಧ 2025ರ ಅಕ್ಟೋಬರ್‌ನಲ್ಲಿ ಕೊನೆಯ ಸಲ ಈ ತಂಡ ಟಿ-20 ಪಂದ್ಯ ಆಡಿದ್ದು, ಲಯ ಕಾಣಲು ಸಮಯ ತೆಗೆದುಕೊಂಡಿತು.

ಜಾನ್ ಫ್ರಿಲಿಂಕ್ (30) ಮತ್ತು ಯಾನ್ ನಿಕೊಲ್ ಲೋಫ್ಟಿಏಟನ್ (42) ಅವರು ಎರಡನೇ ವಿಕೆಟ್‌ಗೆ 60 ರನ್ ಸೇರಿಸಿದ್ದು ಇನಿಂಗ್ಸ್‌ನಲ್ಲಿ ಉಲ್ಲೇಖನೀಯ ಅಂಶವೆನಿಸಿತು. ಬಾಸ್ ಡಿ ಲೀಡೆ ಮತ್ತು ಕಾಲಿನ್ ಆ್ಯಕರಮನ್ (32, 28ಎ) ಮೂರನೇ ವಿಕೆಟ್‌ಗೆ 70 ರನ್ ಸೇರಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು. ಲೀಡೆ 48 ಎಸೆತಗಳಲ್ಲಿ 5 ಬೌಂಡರಿ, ನಾಲ್ಕು ಸಿಕ್ಸರ್ ಗಳಿದ್ದ 72 ರನ್ ಗಳಿಸಿ ಔಟಾಗದೇ ಉಳಿದರು. ನಾಯಕ ಸ್ಕಾಟ್ ಎಡ್ವರ್ಡ್ಸ್ 18 ರನ್ ಗಳಿಸಿ ಅಜೇಯರಾಗುಳಿದರು.

**ಸಂಕ್ಷಿಪ್ತ ಸ್ಕೋರು**

**ನಮೀಬಿಯಾ:** 20 ಓವರುಗಳಲ್ಲಿ 8ಕ್ಕೆ 156 (ಜಾನ್ ಫ್ರಿಲಿಂಕ್ 30, ಯಾನ್ ನಿಕೊಲ್ ಲೋಫ್ಟಿಏಟನ್ 42, ಲೋಗನ್ ವ್ಯಾನ್ ಬೀಕ್ 13ಕ್ಕೆ2, ಬಾಸ್ ಡಿ ಲೀಡೆ 13ಕ್ಕೆ2)

**ನೆದರ್ಲೆಂಡ್ಸ್:** 18 ಓವರುಗಳಲ್ಲಿ 3ಕ್ಕೆ 159 (ಮೈಕೆಲ್ ಲೆವಿಟ್ 28, ಬಾಸ್ ಡಿ ಲೀಡೆ ಔಟಾಗದೇ 72, ಕಾಲಿನ್ ಆ್ಯಕರ್ಮನ್ 32).

## ಅಪ್ರಕಟಿತ ಆತ್ಮಚರಿತ್ರೆ ವಿವಾದ: ದಿನಕ್ಕೊಂದು ತಿರುವು



• ಪ್ರಜೋದಯ ವರದಿ

**ನವದೆಹಲಿ:** ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಕೃತಿ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಕುರಿತ ವಿವಾದವು ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ.

ಈ ಕುರಿತು ಮಂಗಳವಾರ ಹೇಳಿಕೆ ಬಿಡುಗಡೆ ಮಾಡಿರುವ ಪ್ರಕಾಶನ ಸಂಸ್ಥೆ ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾ (ಪಿಆರ್‌ಹೆಚ್‌ಐ), ನರವಣೆ ಅವರ ಪುಸ್ತಕವನ್ನು ಈ ವರೆಗೆ ಯಾವ ರೂಪದಲ್ಲೂ ಸಂಸ್ಥೆ ಪ್ರಕಟಿಸಿಲ್ಲವೆಂದು ಹೇಳಿದೆ. ಪುಸ್ತಕದ ಲಭ್ಯತೆ ಕುರಿತು ನರವಣೆ ಅವರು 2023ರ ಡಿಸೆಂಬರ್‌ನಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ್ದ ಪೋಸ್ಟ್ ಅನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಉಲ್ಲೇಖಿಸಿದ ಬೆನ್ನಲ್ಲೇ ಪಿಆರ್‌ಹೆಚ್‌ಐ ಈ ಸ್ಪಷ್ಟನೆ ನೀಡಿದೆ.

ಪುಸ್ತಕವೊಂದನ್ನು ಪ್ರಕಟಿಸುವ ಯೋಜನೆ ಬಗ್ಗೆ ಮಾಡುವ ಘೋಷಣೆಗೂ ಹಾಗು ಮುಂಗಡವಾಗಿ ಅದನ್ನು ಕಾಯ್ದಿರಿಸುವ ಅವಕಾಶದ ಕುರಿತು ಘೋಷಿಸುವುದಕ್ಕೂ ವ್ಯತ್ಯಾಸ ಇದೆ. ಈ ರೀತಿ ಘೋಷಣೆ ಮಾಡಿದಾಕ್ಷಣ ಪುಸ್ತಕವು ಪ್ರಕಟಗೊಂಡಿದೆ ಎಂಬುದಾಗಿ ಅರ್ಥೈಸಬಾರದು ಎಂದು ಹೇಳಿದೆ. ಒಂದು ಪುಸ್ತಕ ಕುರಿತು ಮಾಡುವ ಘೋಷಣೆಯು, ಬರುವ ದಿನಗಳಲ್ಲಿ ಅದನ್ನು ಪ್ರಕಟಿಸಲು ಪ್ರಕಾಶನ ಸಂಸ್ಥೆ ಯೋಜಿಸಿದೆ ಎಂಬುದನ್ನು ಸೂಚಿಸುತ್ತದೆ ಎಂದು ಹೇಳಿದೆ. ಪುಸ್ತಕವೊಂದನ್ನು ಮುಂಗಡವಾಗಿ ಕಾಯ್ದಿರಿಸಲು ಅವಕಾಶ ನೀಡುವ ಪರಿಪಾಟ ಕೂಡ ರೂಢಿಯಲ್ಲಿದೆ. ಪುಸ್ತಕ ಬಿಡುಗಡೆಗೂ ಮುನ್ನವೇ, ಓದುಗರು ಹಾಗು ಚಿಲ್ಲರೆ ಮಾರಾಟ ಗಾರರು ತಮಗೆ ಬೇಕಾಗುವಷ್ಟು ಪ್ರತಿಗಳನ್ನು ಕಾಯ್ದಿರಿಸಲು ಅದರಿಂದ ಸಾಧ್ಯವಾಗಲಿದೆ. ಆದರೆ, ಈ ರೀತಿ ಘೋಷಣೆ ಮಾಡಿದಾಕ್ಷಣ ಪುಸ್ತಕವು ಪ್ರಕಟವಾಗಿದೆ ಅಥವಾ ಖರೀದಿಗೆ ಲಭ್ಯವಿದೆ ಎಂದರ್ಥವಲ್ಲವೆಂದೂ ಹೇಳಿದೆ.

## ಶ್ರವಣಬೆಳಗೊಳ ಸೆಸ್ಕಾಂ ಕಚೇರಿ ದಾಖಲೆ ಕೊಠಡಿಗೆ ಭೂಮಿಪೂಜೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶ್ರವಣಬೆಳಗೊಳದ ಸೆಸ್ಕಾಂ ಕಚೇರಿ ಆವರಣದಲ್ಲಿ 31 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ದಾಖಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎನ್. ಬಾಲಕೃಷ್ಣ ಸೋಮವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಅವರು ಮಾತನಾಡಿ, ಚನ್ನರಾಯಪಟ್ಟಣ ಹಾಗು ಶ್ರವಣಬೆಳಗೊಳಕ್ಕೆ ವಿದ್ಯುತ್ ಕೇಬಲ್ ಅಳವಡಿಕೆ ಮಾಡಲು ಅನುಮೋದನೆಯಾಗಿದ್ದು, ಶೀಘ್ರದಲ್ಲಿ ಶ್ರವಣಬೆಳಗೊಳಕ್ಕೆ ಆದ್ಯತೆ ನೀಡಿ ಕಾಮಗಾರಿ ಪೂರ್ಣಗೊಳಿಸಲಾಗುವುದು. ರೈತರಿಗೆ ಬೇಸಿಗೆ ಕಾಲದಲ್ಲಿ ವಿದ್ಯುತ್ ವ್ಯತ್ಯಯ ಹಾಗು ಇನ್ನಿತರ ತೊಂದರೆಯಾಗದಂತೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಶ್ರವಣಬೆಳಗೊಳ ಪಟ್ಟಣ ಸೇರಿ ಹೋಬಳಿಯ ಕೆಲವು ಗ್ರಾಮಗಳಿಗೆ ಮುಂದಿನ ದಿನಗಳಲ್ಲಿ ನಿರಂತರ ಜ್ಯೋತಿ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗುವುದೆಂದರು.

ಶ್ರವಣಬೆಳಗೊಳ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಎಸ್.ಎಂ. ಲಕ್ಷ್ಮಣ್, ಎಸ್.ಆರ್.ಲೋಕೇಶ್, ಸದಸ್ಯ ಕೃಷ್ಣಮೂರ್ತಿ, ಕಾಂತರಾಜಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಹೇಂದ್ರ, ಮಹೇಶ್ ಬಾಬು, ಗುತ್ತಿಗೆದಾರ ಮಂಜೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರ ಚಲುವರಾಜ್, ಸಹಾಯಕ ಅಭಿಯಂತರ ಚಂದ್ರಶೇಖರ್, ಸೆಸ್ಕ್ ಸಿಬ್ಬಂದಿಹರ್ಷ, ಯಲ್ಲಪ್ಪ, ಪ್ರವೀಣ್, ಸುಮಿತ್ರಾ, ಶಿವಲಿಂಗಪ್ಪ ಇದ್ದರು.

## ಸೇನಾ ಪರೀಕ್ಷೆಯಲ್ಲಿ ಅಕ್ರಮ: 18 ಜನರ ಬಂಧನ

• ಪ್ರಜೋದಯ ವರದಿ

**ಬೆಂಗಳೂರು:** ಇತ್ತೀಚೆಗೆ ನಡೆದ ಸೇನಾ ಗ್ರೂಪ್ ಸಿ ನೇಮಕಾತಿ ಪರೀಕ್ಷೆಗೆ ಹಾಜರಾದ ಹದಿನೆಂಟು ಅಭ್ಯರ್ಥಿಗಳನ್ನು ವಂಚನೆ ಮತ್ತು ಅಕ್ರಮದಲ್ಲಿ ತೊಡಗಿರುವ ಆರೋಪದ ಮೇಲೆ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫೆ.8 ರಂದು ನಡೆದ ಪರೀಕ್ಷೆಯಲ್ಲಿ ಎಲೆಕ್ಟ್ರಾನಿಕ್ ಉಪಕರಣ ಬಳಸಿ ನಕಲು ಮಾಡಿದ ಆರೋಪದ ಮೇಲೆ 18 ಪರೀಕ್ಷಾರ್ಥಿಗಳನ್ನು ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

515 ಸೇನಾ ನೆಲೆ ಕಾರ್ಯಾಗಾರದ ಕಮಾಂಡೆಂಟ್ ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ಕರ್ನಲ್ ಹಾಗು ಭದ್ರತಾ ಅಧಿಕಾರಿ ಎಸ್.ಎಸ್. ಜ್ಯೋತಿರ್ಲಿಂಗಂ ಅವರು ನೀಡಿದ ಎಫ್‌ಐಆರ್ ಆಧರಿಸಿ ಕ್ರಮ ಕೈಗೊಳ್ಳಲಾಗಿದೆ.

ಸಿವಿಲ್ ಡಿಫೆನ್ಸ್ ಎಂಪ್ಲಾಯಿ ರೆಕ್ರೂಟ್‌ಮೆಂಟ್‌ನ ಗ್ರೂಪ್ ಸಿ ವಿಭಾಗದ ಲೋವರ್ ಡಿವಿಷನ್ ಕ್ಲರ್ಕ್ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಪರೀಕ್ಷೆ ನಡೆದಿತ್ತು.

## ದೇವರಾಜೇಗೌಡ ಬ್ಲ್ಯಾಕ್ ಮೇಲರ್: ಕಾಂಗ್ರೆಸ್ ಆರೋಪ

• ಪ್ರಜೋದಯ ವರದಿ




**ಹಾಸನ:** ಬಿಜೆಪಿ ಮುಖಂಡ ದೇವರಾಜೇಗೌಡ ಒಬ್ಬ ಆರ್‌ಟಿಐ ಕಾರ್ಯಕರ್ತ, ಬ್ಲ್ಯಾಕ್ ಮೇಲರ್. ಆರ್‌ಟಿಐ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಮಾಹಿತಿ ಪಡೆದು ಸುದ್ದಿಗೋಷ್ಠಿಯಲ್ಲಿ ಅಪಪ್ರಚಾರ ನಡೆಸಿ ಹಣ ಪಡೆಯುವುದನ್ನು ರೂಢಿ ಮಾಡಿಕೊಂಡಿದ್ದಾರೆಂದು ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಮಾಧ್ಯಮ ವಿಭಾಗದ ಜಿಲ್ಲಾಧ್ಯಕ್ಷ ಹೆಚ್.ಆರ್. ವಿನೋದ್ ಕುಮಾರ್ ಅವರು ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆ ಯಲ್ಲಿ 80 ಕೋಟಿ ರೂ. ಆಸ್ತಿ ಘೋಷಣೆ ಮಾಡಿಕೊಂಡಿಕೊಂಡಿದ್ದಾರೆ. ಅವರಿಗೆ ಇಷ್ಟೊಂದು ಹಣ ಎಲ್ಲಿಂದ ಬಂತು ಎಂದು ಪ್ರಶ್ನಿಸಿದ ಅವರು, ಕಾಂಗ್ರೆಸ್ ಮುಖಂಡ ಹೆಚ್.ಕೆ.ಮಹೇಶ್ ವಿರುದ್ಧ ಮಾಡಿರುವ ಆರೋಪಗಳು ಸುಳ್ಳು ಮತ್ತು ಆಧಾರ ರಹಿತವಾಗಿವೆ. ಮಹೇಶ್ ವಿರುದ್ಧ ಮಾಡಿರುವ ಆರೋಪ ಸಾಬೀತು ಮಾಡದೇ ಇದ್ದರೆ ಬಹಿರಂಗ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ಅಗಿಲೆ ಗುರು ಮಾತನಾಡಿ, ಹಾಸನದಲ್ಲಿ ಹಿಂದೆ ಪೆನ್‌ಡ್ರೈವ್ ಹಂಚಿದ್ದು ಯಾರು ಎಂಬುದು ಜಿಲ್ಲೆಯ ಜನರಿಗೆ ಗೊತ್ತಿದೆ. ಅವರು ತಮ್ಮ ನಿಲುವು ಬದಲಿಸಿಕೊಳ್ಳಬೇಕು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಹಿರಿಯರ ಬಗ್ಗೆ ಮಾತನಾಡುವಾಗ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರ ಕಪ್ಪು ಮಸಿ ಬಳಿಯುವುದಾಗಿ ಎಚ್ಚರಿಕೆ ನೀಡಿದರು.

ಪ್ರವೀಣ್ ಗೌಡ ಮಾತನಾಡಿ, ದೇವರಾಜೇಗೌಡ ಮಾನಸಿಕ ಅಸ್ವಸ್ಥನಂತೆ ಮಾತನಾಡುತ್ತಿದ್ದಾರೆ. ಅವರು ಸೂಕ್ತ ಚಿಕಿತ್ಸೆ ಪಡೆದರೆ ನಾವೇ ವೆಚ್ಚ ಭರಿಸುತ್ತೇವೆ. ಈತ ಒಬ್ಬ ಪೆನ್ ಡ್ರೈವ್ ಗಿರಾಕಿ, ಅಯೋಗ್ಯ, ಅವರ ವರ್ತನೆ ಬದಲಿಸಿಕೊಳ್ಳದಿದ್ದರೆ ತಕ್ಕ ಶಾಸ್ತಿ ಕಾದಿದೆ ಎಂದು ಎಚ್ಚರಿಸಿದರು. ಮುಖಂಡರಾದ ಅಲ್ವಿನ್, ನಯಾಜ್ ಇದ್ದರು.

## ಆಸ್ತಿಗಾಗಿ ಪತ್ನಿಯಿಂದ ಕಿರುಕುಳ: ಪತಿ ಆರೋಪ

• ಪ್ರಜೋದಯ ವರದಿ




**ಹಾಸನ:** ಪತ್ನಿ ಆಸ್ತಿ ದುರಾಸೆಗಾಗಿ ನನಗೆ ಮತ್ತು ನಮ್ಮ ಕುಟುಂಬಕ್ಕೆ ಕಿರುಕುಳ, ಮಾನಸಿಕ ಹಿಂಸೆ ನೀಡುತ್ತಿದ್ದಾರೆಂದು ಪತಿ, ಅರಕಲಗೂಡು ಪಟ್ಟಣದ ಕೋಟೆ ಬೀದಿ ನಿವಾಸಿ ಶಶಿಕುಮಾರ್ ಅವರು ದೂರಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಪತ್ನಿ ಅರ್ಪಿತಾ, ನನ್ನ ತಂದೆ-ತಾಯಿ, ಸಹೋದರಿಯರು ಹಾಗು ಪೊಲೀಸ್ ಇಲಾಖೆಯ ವಿರುದ್ಧ ಸಾಮಾಜಿಕ ಜಾಲ ತಾಣಗಳಲ್ಲಿ ಸುಳ್ಳು ಮಾಹಿತಿ ಹರಡುತ್ತಿದ್ದಾಳೆ. ಅವೆಲ್ಲವೂ ಸುಳ್ಳು ಮತ್ತು ಆಧಾರರಹಿತ ಆರೋಪ. ಕೆಲ ದಿನಗಳಿಂದ ವಾಟ್ಸ್‌ಆ್ಯಪ್, ಫೇಸ್ ಬುಕ್ ಹಾಗು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹರಡುತ್ತಿದ್ದಾಳೆ. ಅದರಿಂದ ನಮ್ಮ ಕುಟುಂಬದ ಮಾನಹಾನಿ ಆಗುತ್ತಿದೆ ಎಂದು ಅಲವತ್ತುಕೊಂಡರು.

ನಾನು ಬೆಂಗಳೂರಿನಲ್ಲಿ ಕ್ಯಾಬ್ ಚಾಲಕನಾಗಿದ್ದು, ಅಲ್ಲಿ ಮನೆ ಸಹ ಮಾಡಿದ್ದೇನೆ. ಅಲ್ಲಿಗೆ ಪತ್ನಿ ಬರಲು ಒಪ್ಪುತ್ತಿಲ್ಲ. ನನ್ನ ತಂದೆ ಗೋಪಾಲ್ ಶೆಟ್ಟಿ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರಾಗಿದ್ದು, ಕಷ್ಟಪಟ್ಟು ಮನೆ ಕಟ್ಟಿದ್ದಾರೆ. ಆ ಮನೆ ನನಗೇ ಬೇಕೆಂದು ಅರ್ಪಿತಾ ಕಾಟ ಕೊಡುತ್ತಿದ್ದಾಳೆ. ಅರ್ಪಿತಾ ಹಾಗು ನಮ್ಮ ಕುಟುಂಬದ ನಡುವಿನ ವ್ಯಾಜ್ಯ ಸದ್ಯ ಕೋರ್ಟ್‌ನಲ್ಲಿ ನಡೆಯುತ್ತಿದೆ. ವಿಚಾರಣೆ ಇದ್ದಾಗಲೆಲ್ಲ ನ್ಯಾಯಾಧೀಶರು, ಪತ್ನಿಗೆ ಗಂಡನ ಜೊತೆ ಇರು ಎಂದು ಬುದ್ಧಿವಾದ ಹೇಳಿದ್ದಾರೆ. ಆಗ ಸರಿ ಎಂದು ಒಪ್ಪಿಕೊಳ್ಳುವ ಪತ್ನಿ, ನಂತರ ನಾನು ಎಲ್ಲಿಗೂ ಬರುವುದಿಲ್ಲ. ಅರಕಲಗೂಡಿನಲ್ಲೇ ಇರಬೇಕೆಂದು ಪಟ್ಟು ಹಿಡಿಯುತ್ತಾಳೆ. ಅದಕ್ಕೆಲ್ಲ ಆಕೆಯ ತಂದೆ-ತಾಯಿ ಕುಮ್ಮಕ್ಕು ಕಾರಣ ಎಂದು ದೂರಿದರು.

ನನಗೆ ಒಬ್ಬ ಮಗ ಇರುವುದರಿಂದ ನಾನು ಈಗಲೂ ನನ್ನ ಜೊತೆ ಬಾ, ನಿನ್ನ ಹಾಗು ಮಗನನ್ನು ಚೆನ್ನಾಗಿ ನೋಡಿಕೊಳ್ಳುವೆ ಎಂದು ಹೇಳಿದರೂ ಕೇಳುತ್ತಿಲ್ಲ. ಮನೆಯಲ್ಲಿ ಸಣ್ಣ ಸಣ್ಣ ವಿಚಾರಕ್ಕೂ ಗಲಾಟೆ ಮಾಡುವುದು, ವೃದ್ಧ ತಂದೆ-ತಾಯಿಗೆ ಊಟ-ತಿಂಡಿ ನೀಡದೆ ನಿರ್ಲಕ್ಷ್ಯ ತೋರುವುದು, ಯಾರಿಗೂ ತಿಳಿಸದೇ ಹೊರ ಹೋಗುವುದು, ಕೇಳಿದರೆ ಉಡಾಫೆ ಉತ್ತರ ನೀಡುವುದು, ಪದೇ ಪದೇ 112ಕ್ಕೆ ಕರೆ ಮಾಡಿ ಪೊಲೀಸರನ್ನು ಕರೆಸುವುದು, ಮಾತೆತ್ತಿದರೆ ನಾನು ಹೆಣ್ಣು, ನಿಮ್ಮ ಇಡೀ ಕುಟುಂಬವನ್ನು ಜೈಲಿಗೆ ಕಳುಹಿಸುತ್ತೇನೆಂದು ಧಮ್ಕಿ ಹಾಕುತ್ತಾಳೆ. ನನಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮಹಿಳಾ ಸಂಘ, ಮಾಧ್ಯಮದವರು ಗೊತ್ತು ಎಂದು ಹೆದರಿಸುತ್ತಾಳೆ. ನಾನು ಬೇರೆ ಹೋಗುತ್ತೇನೆ 20 ಲಕ್ಷ ಕೊಡು ಎಂದು ಡಿಮ್ಯಾಂಡ್ ಮಾಡುತ್ತಾಳೆ. ನನಗೆ, ನನ್ನ ಕುಟುಂಬಕ್ಕೆ ನ್ಯಾಯ ಕೊಡಿಸಬೇಕೆಂದು ಮನವಿ ಮಾಡಿದರು. ಗೋಪಾಲಶೆಟ್ಟಿ, ಭಾಗ್ಯಮ್ಮ, ಜ್ಯೋತಿ, ಶಾಂತಕುಮಾರಿ, ಲೋಕೇಶ್ ಇದ್ದರು.

## ಅಂಗವಿಕಲರ ಮೇಲೆ ದರ್ಪ: ಅಂಧರ ಒಕ್ಕೂಟ ಆರೋಪ

• ಪ್ರಜೋದಯ ವರದಿ




**ಹಾಸನ:** ಅಂಗವಿಕಲರ ಮೇಲೆ ನಡೆಯುತ್ತಿರುವ ದರ್ಪ, ಅನ್ಯಾಯ ಮತ್ತು ಸವಲತ್ತುಗಳ ನಿರಾಕರಣೆಯನ್ನು ಸಂಬಂಧಪಟ್ಟವರು ಗಂಭೀರವಾಗಿ ಪರಿಗಣಿಸಬೇಕೆಂದು ಕರ್ನಾಟಕ ಅಂಧರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ತಮ್ಮಯ್ಯ ಅವರು ಮನವಿ ಮಾಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗೆ ಕಾನೂನು ಗೊತ್ತಿಲ್ಲ, ಅನುಭವ ಇಲ್ಲ, ಎಂಎಸ್‌ಡಬ್ಲ್ಯೂ ತರಬೇತಿ ಪಡೆದಿಲ್ಲ. ಅದಕ್ಕಾಗಿಯೇ ನಮ್ಮ ಮೇಲೆ ದರ್ಪ ಮಾಡುತ್ತಿದ್ದಾರೆ. ಹಿಂದೆ ನಾವು ಸುದ್ದಿಗೋಷ್ಠಿ ನಡೆಸಿ ನಮ್ಮ ನೋವನ್ನು ಹೇಳಿಕೊಂಡಿದ್ದೇವೆ. ಕಮಲಾಕ್ಷಿ ಎಂಬ ಮಹಿಳಾ ಆಟಗಾರ್ತಿ ಹಾಗು ಇತರರು ಯಾವುದೇ ಸಂಬಂಧವಿಲ್ಲದ ವಿಷಯ ಮುಂದಿಟ್ಟುಕೊಂಡು ನಮ್ಮ ಮೇಲೆ ಆಕ್ರೋಶ ವ್ಯಕ್ತಪಡಿಸಿರುವುದು ಖಂಡನೀಯ. ಅದಕ್ಕೆ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಅವರ ಕುಮ್ಮಕ್ಕು ನೇರ ಕಾರಣ ಎಂದು ಆರೋಪಿಸಿದರು.

ನಮಗಾಗುತ್ತಿರುವ ಅನ್ಯಾಯ ಖಂಡಿಸಿ ಫೆ.25 ರಂದು ಧರಣಿ ನಡೆಸಲಾಗುವುದು. ಕಮಲಾಕ್ಷಿ ಹಾಗು ಇತರರಿಗೆ ಡಿಡಿಡಬ್ಲ್ಯೂ ಅವರಿಂದ ಅನುಕೂಲ ಆಗಿದ್ದರೆ ಅವರ ಬಗ್ಗೆ ಏನು ಬೇಕಾದರೂ ಮಾತನಾಡಲಿ, ನಮ್ಮ ವಿರೋಧಿಸಲು ಅವರು ಯಾರು ಎಂದು ಪ್ರಶ್ನಿಸಿದ ಅವರು, ಡಿಡಿಡಬ್ಲ್ಯೂ ಅವರು ನಮ್ಮನ್ನು ಅವಮಾನಿಸಿರುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಆದರೂ ಕಮಲಾಕ್ಷಿ ಅವರು ಅವರ ಬಂಧುವಾಗಿರುವುದರಿಂದ ಸ್ವಜನ ಪಕ್ಷಪಾತ, ಸ್ವಾರ್ಥದಿಂದ ಮಾತ ನಾಡಿದ್ದಾರೆ ಎಂದರು.

ಸಂಘದ ಅಧ್ಯಕ್ಷ ಸಣ್ಣಸ್ವಾಮಿ ಅವರು ಮಾತನಾಡಿ, ಅಧಿಕಾರಿ ಅವರು ನಮ್ಮ ಕೆಲಸ ಮಾಡುವ ಇಚ್ಛೆ ಇದ್ದರೆ ಮಾಡಲಿ, ಇಲ್ಲದಿದ್ದರೆ ಜಿಲ್ಲೆ ಬಿಟ್ಟು ಹೋಗಲಿ. ಅಂಗವಿಕಲರ ಮೇಲೆ ಅವರು ಸವಾರಿ ಮಾಡುವುದನ್ನು ನಿಲ್ಲಿಸಿ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

ನಿರ್ದೇಶಕ ಬಾಬು ಮಾತನಾಡಿ, ನಮ್ಮ ನಡುವೆ ಒಡೆದಾಳುವ ಕೆಲಸವನ್ನು ಯಾರೂ ಮಾಡಬಾರದು. ದಯವಿಟ್ಟು ಅರ್ಹರಿಗೆ ಸಹಾಯ ಮಾಡಲಿ, ನಮ್ಮ ವಿರುದ್ಧ ಯಾರದೋ ಸ್ವಾರ್ಥಕ್ಕೆ ಎತ್ತಿ ಕಟ್ಟುವುದು ಬೇಡ, ನಾವೆಲ್ಲರೂ ಒಗ್ಗಟ್ಟಾಗಿ ಹೋರಾಡೋಣ ಎಂದು ಮನವಿ ಮಾಡಿದರು. ಅಂಧರ ಒಕ್ಕೂಟದ ಬಾಬು, ಹೊನ್ನೇಗೌಡ, ಶ್ರೀನಿವಾಸ್, ಮಂಜೇಗೌಡ ಇದ್ದರು.

## ಜಂಬೂರು ಗ್ರಾಮದಲ್ಲಿ ಕೋಟೆ ಮಾರಮ್ಮ ಬ್ರಹ್ಮ ರಥೋತ್ಸವ

• ಪ್ರಜೋದಯ ವರದಿ



**ನುಗ್ಗೇಹಳ್ಳಿ:** ಹೋಬಳಿಯ ಜಂಬೂರು ಗ್ರಾಮದ ಶ್ರೀ ಕೋಟೆ ಮಾರಮ್ಮ ಬ್ರಹ್ಮರಥೋತ್ಸವ ಸೋಮವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಜಾತ್ರಾ ಮಹೋತ್ಸವ ಹಾಗು ರಥೋತ್ಸವ ಅಂಗವಾಗಿ ಭಾನುವಾರ ಮತ್ತು ಸೋಮವಾರ ದೇವಾಲಯದಲ್ಲಿ ಶ್ರೀ ಕೋಟೆ ಮಾರಮ್ಮ ದೇವಿಗೆ ಬೆಳಿಗ್ಗೆಯಿಂದಲೇ ಅಭಿಷೇಕ, ಹೂವಿನ ಅಲಂಕಾರ ಸೇರಿ ವಿಶೇಷ ಪೂಜೆ ನೆರವೇರಿತು. ಮಹಿಳೆಯರು ತಂಬಿಟ್ಟಿನ ಆರತಿಯೊಂದಿಗೆ ಉತ್ಸವದಲ್ಲಿ ಭಾಗಿಯಾದರು.

ಸುತ್ತಲಿನ ಮಂಚೇನಹಳ್ಳಿ, ತೆಂಕನಹಳ್ಳಿ, ಹುಲಿಕೆರೆ, ಅತ್ತಿಹಳ್ಳಿ, ಹೊನ್ನಮಾರನಹಳ್ಳಿ, ಅವೇರಹಳ್ಳಿ, ಮುದ್ದನಹಳ್ಳಿ, ಒಂಟಿ ಮಾವಿನಹಳ್ಳಿ ಸೇರಿ ರಾಜ್ಯದ ನಾನಾ ಭಾಗದ ಭಕ್ತರು ರಥೋತ್ಸವ ದಲ್ಲಿ ಪಾಲ್ಗೊಂಡರು.

ಸಂಪ್ರದಾಯದಂತೆ ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ನಂತರ ರಥದ ಸುತ್ತ ದೇವರ ಪ್ರದಕ್ಷಿಣೆ ನಡೆಸಿ ಪ್ರತಿಷ್ಠಾಪಿಸಲಾಯಿತು. ಭಕ್ತರು ಹಣ್ಣು ದವನ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ರಥೋತ್ಸವದ ಅಂಗವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಚಂಡಿಕೆ ಮೇಳ ತಂಡದವರು ಚಂಡಿಕೆ ವಾದ್ಯ ನಡೆಸಿಕೊಟ್ಟರು. ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ರಥೋತ್ಸವ ಅಂಗವಾಗಿ ಗ್ರಾಮದ ಶನೇಶ್ವರ ಸ್ವಾಮಿ, ಶ್ರೀ ಜಕೇಶ್ವರಸ್ವಾಮಿ ದೇವಾಲಯಗಳಲ್ಲಿ ವಿಶೇಷ ಪೂಜೆ ನೆರವೇರಿದವು. ಗ್ರಾಮವು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿತ್ತು.

ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಕುಟುಂಬಸ್ಥರು, ಗ್ರಾಮದ ಪ್ರಮುಖ ನಾಗಭೂಷಣ್ ಮತ್ತಿತರರು ಪಾಲ್ಗೊಂಡಿದ್ದರು.

## ಎಪ್‌ಸ್ಟೀನ್ ಪ್ರಕರಣದಲ್ಲಿ ಪ್ರಧಾನಿ ಹೆಸರು: ಪ್ರತಿಭಟನೆ

**ಹಾಸನ:** ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿರುವ ಜೆಫ್ರಿ ಎಪ್‌ಸ್ಟೀನ್ ಪ್ರಕರಣ ದಲ್ಲಿ ಭಾರತದ ಪ್ರಧಾನಿ ಹೆಸರಿನ ಉಲ್ಲೇಖವಾಗಿರುವುದು ದೇಶದ ಗೌರವಕ್ಕೆ ಧಕ್ಕೆ ತಂದಿದೆ ಎಂದು ಆರೋಪಿಸಿ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ನಗರದ ಹೇಮಾವತಿ ಪ್ರತಿಮೆ ಎದುರು ಮಂಗಳವಾರ ಪ್ರತಿಭಟನೆ ನಡೆಯಿತು.

ಈ ವೇಳೆ ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು ಮಾತನಾಡಿ, ಇಂತಹ ಗಂಭೀರ ಪ್ರಕರಣದಲ್ಲಿ ಪ್ರಧಾನಿ ಹೆಸರು ಕೇಳಿ ಬರುತ್ತಿರುವುದು ದೇಶದ ಘನತೆಗೆ ಕಪ್ಪುಚುಕ್ಕಿ ಯಾಗಿದೆ. ಭಾರತವು ವಿಶ್ವದಾದ್ಯಂತ ತನ್ನದೇ ಆದ ಮಾನ, ಗೌರವ ಮತ್ತು ಕೀರ್ತಿಯನ್ನು ಗಳಿಸಿರುವ ಸಂದರ್ಭದಲ್ಲಿ ಇಂತಹ ವಿವಾದಗಳು ದೇಶದ ಮರ್ಯಾದೆಯನ್ನು ಹಾಳು ಮಾಡುವಂತಿದೆ. ಈ ಪ್ರಕರಣದಲ್ಲಿ ಪ್ರಧಾನಮಂತ್ರಿ ನೈತಿಕ ಹೊಣೆ ಹೊತ್ತು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ರಾಜೀನಾಮೆ ನೀಡದೇ ಇದ್ದಲ್ಲಿ ಯುವ ಕಾಂಗ್ರೆಸ್ ವತಿಯಿಂದ ಮುಂದಿನ ದಿನಗಳಲ್ಲಿ ಹೋರಾಟ ಕೈಗೊಳ್ಳಲಾಗುವುದು. ಇನ್ನೂ ವಿದೇಶ ಪ್ರವಾಸದ ವೇಳೆ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎದುರು ನಡೆದ ವರ್ತನೆ ಕುರಿತು ಟೀಕಿಸಿದ ಅವರು, ಅದರಿಂದ ದೇಶದ ಗೌರವಕ್ಕೆ ಧಕ್ಕೆಯಾಗಿದೆ. ಇಂತಹ ವರ್ತನೆ ತೋರಿರುವವರಿಗೆ ಯಾವ ರೀತಿಯ ನೈತಿಕತೆ ಇದೆ ಎಂಬ ಪ್ರಶ್ನೆ ಉದ್ಭವಿಸುತ್ತದೆಂದು ಹೇಳಿದರು. ಈ ಎಲ್ಲಾ ಬೆಳವಣಿಗೆಗಳಿಗೆ ಪ್ರಧಾನಿ ಹೊಣೆಗಾರರಾಗಿದ್ದು, ದೇಶದ ಜನರಿಗೆ ಸ್ಪಷ್ಟನೆ ನೀಡುವ ಜೊತೆಗೆ ರಾಜೀನಾಮೆ ನೀಡುವುದು ಅಗತ್ಯ ವಾಗಿದೆ ಎಂದು ಹೇಳಿದರು.

ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಮನು, ಇಸ್ಮಾಯಿಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದರ್ಶನ್, ತಾಲ್ಲೂಕು ಅಧ್ಯಕ್ಷ ಇರ್ಫಾನ್, ನಗರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ನಿಹಾಲ್, ಗ್ರಾಮಾಂತರ ಅಧ್ಯಕ್ಷ ಕಿರಣ್, ಸಾಗರ್, ವಿವೇಕ್, ಜೀವನ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019